ಜನಪದ ವಿಚಾರ


ಬೆಲೆ : ರೂ ೧೦-೦೦

ಚಿಂತನ * ದರ್ಶನ * ವಿಮರ್ಶನ

ಜನಪದ ಸೇವಾ ಟ್ರಸ್ಟ್ ಪ್ರಕಟಣೆ

ತಿಂಗಳ ವೈಚಾರಿಕ ಡೈಜೆಸ್ಟ್

ಸಂಪುಟ-೧೩ ಏಪ್ರಿಲ್ -೨೦೧೩ ಸಂಚಿಕೆ-೯



ಕಗ್ಗತ್ತಲೆಯ ಗವಿಯೊಳಗೆ ನೂಕುವ ಚುನಾವಣೆ ಬಂದಿದೆ!

ಜನಪದ ವಿಚಾರದಲ್ಲಿ

ಏಪ್ರಿಲ್ - ೨೦೧೩

ರಾಜ್ಯ ಮತ್ತು ಕೇಂದ್ರ ಸರ್ಕಾರಗಳ ರಚನೆಗಾಗಿ ಸಾರ್ವತ್ರಿಕ ಚುನಾವಣೆ ಬಂದಿವೆ. ಚುನಾವಣೆಯ ಸಮಯದಲ್ಲಿ ರಾಜಕೀಯ ಪಕ್ಷಗಳ ಮತ್ತು ಮತದಾರರ ಭಾವನೆ ಕಲಕಿರುತ್ತದೆ. ಪ್ರಜಾಪ್ರಭುತ್ವ ದೇಶವೆಂದಾಗಿ ಈ ಚುನಾವಣೆಗಳು. ಆದರೆ ದುರ್ದೈವ ಎಂದರೆ ಚುನಾವಣೆ ಏತಕ್ಕಾಗಿ ಮತ್ತು ಏನನ್ನು ಸಾಧಿಸುವುದಕ್ಕಾಗಿ ಎಂಬುದು ಯಾರಿಗೂ ಸ್ಪಷ್ಟವಾಗಿ ತಿಳಿಯದು. ಇಂತಹ ಪರಿಸ್ಥಿತಿ ಕುರಿತು ವಿಶ್ಲೇಷಣೆ ಈ ಲೇಖನ.

ರವೀಂದ್ರನಾಥ ಟ್ಯಾಗೋರ್ ವಿಶ್ವಕವಿ. ಅವರ ಸಾಹಿತ್ಯಕ್ಕೆ ಯಾವುದೇ ಮೇರೆಯಿಲ್ಲ. ಅವರದು ವಿಶ್ವಾತ್ಮಕತೆ ಎಂಬ ಮಾತನ್ನು ತಿಳಿಯಪಡಿಸುತ್ತದೆ ಈ ಲೇಖನ.

ಗಾಂಧೀಜಿಯನ್ನು ಕುರಿತಾಗಿ ಅಮೇರಿಕನ್ನರಿಗೆ ಗಾಂಧೀಜಿಯ ಪರಿಚಯವನ್ನು ಈ ಲೇಖನ ಮಾಡಿಕೊಡುತ್ತದೆ.

ಓಂಕಾರ ಬಹುಜನರಿಗೆ ಪ್ರಿಯವಾದ ಶಬ್ದ. ಆ ಶಬ್ದದ ಪರಿಚಯ ಈ ಲೇಖನದಲ್ಲಿದೆ.

ಕೇಜ್ರೀವಾಲ್ ಭ್ರಷ್ಟಾಚಾರ ನಿರ್ಮೂಲನಾ ಆಂದೋಲನದ ಪ್ರತೀಕ. ಮುಖೇಶ್ ಅಂಬಾನಿ ಭ್ರಷ್ಟಾಚಾರದ ಪ್ರತೀಕ. ಈ ಎರಡು ವೈರುಧ್ಯ ಸಂಗತಿಗಳ ಒಂದು ಕಿರುನೋಟ ಈ ಲೇಖನ.

ಜನಪದ ವಿಚಾರ

ತಿಂಗಳ ವೈಚಾರಿಕ ಡೈಜೆಸ್ಟ್

ಏಪ್ರಿಲ್ - ೨೦೧೩
ಸಂಪುಟ - ೧೩
ಸಂಚಿಕೆ - ೯

ಸಂಪಾದಕ
ಸುರೇಂದ್ರ ಕೌಲಗಿ

ಸಲಹಾ ಸಮಿತಿ
ಜನಪದ ಸೇವಾ ಟ್ರಸ್ಟ್
ಧರ್ಮದರ್ಶಿ ಮಂಡಳಿ

ಚಂದಾ ವಿವರ
ವಾರ್ಷಿಕ : ರೂ ೧೦೦/-
ಬಿಡಿ ಸಂಚಿಕೆ : ರೂ ೧೦/-

ಸಂಪರ್ಕ ವಿಳಾಸ
ಜನಪದ ಸೇವಾ ಟ್ರಸ್ಟ್(ರಿ)
ಮೇಲುಕೋಟೆ-೫೭೧೪೩೧
ಜಿಲ್ಲಾ ಮಂಡ್ಯ

✆ 08236 316344
✆ 08236 299854
e-mail : janapada@yahoo.com
web: janapada.net

ಒಂದು ಸಂದೇಶ

ಕಾಡಿನಲ್ಲಿ ನಿಂತು ಒಂದು ಸಂದೇಶವಿದೆಯೆಂದ
ಪ್ರವಾದಿ
ಎಲ್ಲ ಪ್ರಾಣಿ ಪಕ್ಷಿ ಉರಗಗಳು ಬಂದು ನೆರೆದವು
ಗಿಡಮರಗಳು ಇದ್ದಲ್ಲೇ ಕಿವಿತೆರದವು

ಪ್ರವಾದಿ ಕಣ್ತುಂಬ ನೋಡಿ ಕೈ ಎತ್ತಿ ಸಾರಿದ
ಪ್ರಭುವಿನ ಇಚ್ಛೆಯಂತಿದ್ದೀರಿ
ಈ ಸಂದೇಶ ನಿಮಗಲ್ಲ.

ಕಡಲತಡಿಯಲ್ಲಿ ನದಿಯ ದಡದಲ್ಲಿ ನಿಂತು
ಒಂದು ಸಂದೇಶವಿದೆಯೆಂದ ಪ್ರವಾದಿ
ಜಲಚರಗಳೆಲ್ಲ ಬಂದು ನೆರೆದವು

ಪ್ರವಾದಿ ಕಣ್ತುಂಬ ನೋಡಿ ಕೈ ಎತ್ತಿ ಸಾರಿದ
ಪ್ರಭುವಿನ ಇಚ್ಛೆಯಂತಿದ್ದೀರಿ
ಈ ಸಂದೇಶ ನಿಮಗಲ್ಲ.

ಜನರ ಗುಂಪಿನ ನಡುವೆ ನಿಂತು ಒಂದು
ಸಂದೇಶವಿದೆಯೆಂದ ಪ್ರವಾದಿ
ಯಾವ ಪಕ್ಷದ ಪ್ರಚಾರವೆಂದು ನಿಂತವರು
ಕೊಂಚ
ನಡೆದವರು ಬಹಳ

ಕೆಡುಕೆನಿಸಿತು, ಕೋಪ ಮರುಕವಾಗಿ ಪ್ರಾರ್ಥಿಸಿದ
ಪ್ರಭೂ, ಕರುಣಿಸು ಇವರಿಗೆ ಸಂಕೊಚ ಪಡದೆ
ಕಾಣುವ ಕಣ್ಣು, ಕೇಳುವ ಕಿವಿ,
ಆಲಿಸುವ ಮನಸು
ಉಳಿಸೆನ್ನ ಆವರೆಗೆ ಇವರ ನಡುವೆ.

– ಓರ್ವ ಪ್ರವಾದಿ

(ಸಾಭಾರ : ಮಯೂರ)

ವಿಚಾರ ದೀಪ್ತಿ

ಲೋಕದಲ್ಲಿ ಶಾಂತಿ, ಸೌಹಾರ್ದ, ನಿಜವಾದ ಪ್ರಜಾತಂತ್ರ ಸ್ಥಾಪನೆಯಾಗಬೇಕಾದರೆ ಹಿಂಸೆ ದಾರಿಯಲ್ಲ, ಅಹಿಂಸೆ. ರಾಜ್ಯವನ್ನಲ್ಲ ಕಟ್ಟಬೇಕಾದುದು – ಸ್ವರಾಜ್ಯವನ್ನು. ಇದುವರೆಗೆ ನಾವು ರಾಜ್ಯ–ಸಾಮ್ರಾಜ್ಯಗಳನ್ನು ಯಶಸ್ವಿಯಾಗಿ ಕಟ್ಟಿದ್ದೇವೆ. ಈಗ ಮುಂದಿನ ಮಜಲು ಸ್ವರಾಜ್ಯ. ಈಗ ಬೇಕಾದದ್ದು ರಾಜ್ಯಶಾಸ್ತ್ರವಲ್ಲ, ಸ್ವರಾಜ್ಯಶಾಸ್ತ್ರ. ಈಗ ಸಮಾಜ ಮಥಿಸಬೇಕಾದುದು ರಾಜಧರ್ಮದ ಸ್ವರೂಪವನ್ನಲ್ಲ, ಪ್ರಜಾಧರ್ಮದ ಸ್ವರೂಪವನ್ನು. ಪ್ರಜೆ ತನ್ನ ಧರ್ಮವನ್ನು ಅರಿತುಕೊಳ್ಳದೆ ಅನುಸರಿಸದೆ ಸ್ವರಾಜ್ಯ ಅಸಂಭವ.

ರಾಜ್ಯಕ್ಕೆ ನ್ಯಾಯಾಂಗ, ಕಾರ್ಯಾಂಗ, ಪೋಲಿಸ್, ಕೋರ್ಟ್, ಕಛೇರಿಗಳ ವಿಸ್ತಾರ ಎಲ್ಲವೂ ಬೇಕು. ಇವೆಲ್ಲವೂ ಪ್ರಜೆಯ ಯೋಗಕ್ಷೇಮದ ಹೆಸರಿನಲ್ಲಿ ಕೆಲವೊಂದು ಜನರ ಚಿಕ್ಕ ಗುಂಪಿನ ಕೈಯಲ್ಲಿ ಅಧಿಕಾರವನ್ನು ಕೇಂದ್ರೀಕರಿಸಿಕೊಡುವ ಹಳೆಯ ರಾಜ್ಯಪದ್ಧತಿ. ಪ್ರಜಾತಂತ್ರ ಎಂಬ ಹೆಸರಿಟ್ಟರೂ ಇಂಥ ಕೇಂದ್ರೀಕೃತ ವ್ಯಾಮಿಶ್ರ ಆಡಳಿತದಲ್ಲಿ ಪ್ರಜೆಗಿರುವ ಅಧಿಕಾರ ಆಡಳಿತ ನಡೆಸುವುದಲ್ಲ, ರಾಜ್ಯಕಾರ್ಯದಲ್ಲಿ ನೆರವಾಗುವುದಲ್ಲ; ಐದು ವರ್ಷಕ್ಕೊಂದು ಸಲ ಒಂದು ಓಟನ್ನು ಎಸೆದು ತನ್ನ ಮೇಲೆ ಅಧಿಕಾರವನ್ನು ನಡೆಸುವ ಬಲಿಷ್ಠರ ಒಂದು ಗುಂಪನ್ನು ಆರಿಸುವುದು ಅಷ್ಟೆ. ನನಗೂ ಒಂದು ಓಟು ಇದೆ ಎಂಬ ಒಣ ಹೆಮ್ಮೆಯೇ ಈ ಪ್ರಜಾಸಾರ್ವಭೌಮತ್ವದ ಸಮಸ್ತ ಶಕ್ತಿ. ಇದು ನಿಜವಾದ ಪ್ರಜಾತಂತ್ರ್ಯವಲ್ಲ. ಪ್ರತಿಯೊಬ್ಬನೂ ರಾಷ್ಟ್ರೀಯ ಜೀವನವನ್ನು ರೂಪುಗೊಳಿಸಲು ಪ್ರತ್ಯಕ್ಷವಾಗಿ ಕೃತಿಪೂರ್ವಕ ನೆರವಾಗುವುದೇ ಪ್ರಜಾತಂತ್ರ; ಅದೇ ಸ್ವರಾಜ್ಯ. ಉಳಿದೆಲ್ಲವೂ ಅಲ್ಪಾಯುತನ, ಬಹುಸಂಖ್ಯಾತನ ಪದ್ಧತಿಗಳು. ಸರ್ವಾಯತನ ಪದ್ಧತಿಯೇ ನಿಜವಾದ ಸ್ವರಾಜ್ಯ ಪದ್ಧತಿ. ಇದಕ್ಕೆ ವಿಕೇಂದ್ರಿಕೃತ ರಾಜಕೀಯ ಅರ್ಥವ್ಯವಸ್ಥೆಯೇ ಮಾರ್ಗ.

ಹೊರೆ ಹೊರೆ ರಾಜ್ಯಶಾಸ್ತ್ರದ ಇತಿಹಾಸಗಳನ್ನು ವಿವರಣೆಯ ಗ್ರಂಥಗಳನ್ನು ಓದಿ ಒಂದಾದರೂ ನಿರ್ಣಾಯಕ ಸಿದ್ಧಾಂತವನ್ನು ಅರಿತುಕೊಳ್ಳಲಾರದಿರುವ ನಮ್ಮ ಕಾಲೇಜು ವಿದ್ಯಾರ್ಥಿಗಳು ಯಾವ ಗ್ರಂಥ ಪರಿಚಯವೂ ಇಲ್ಲದೆ ರಾಜ್ಯ ನಿರ್ಮಾಣ ದುರಂಧರರಾಗಿರುವ ರಾಜಕೀಯ ಮುಖಂಡರು ಸ್ವರಾಜ್ಯವೇನೆಂಬುದನ್ನು ತಿಳಿದುಕೊಂಡಲ್ಲಿ ದೇಶಕ್ಕೆ ಗಂಡಾಂತರ ತಪ್ಪೀತು.

– ಸಿದ್ಧವನಹಳ್ಳಿ ಕೃಷ್ಣಶರ್ಮ

ಕಗ್ಗತ್ತಲೆಯ ಗವಿಯೊಳಗೆ ನೂಕುವ ಚುನಾವಣೆ ಬಂದಿದೆ!

- ಸುರೇಂದ್ರ ಕೌಲಗಿ

ದೇಶದ ಸಂವಿಧಾನದ ಪ್ರಕಾರ ೫ ವರ್ಷಗಳಿಗೊಮ್ಮೆ ಸಾರ್ವತ್ರಿಕ ಚುನಾವಣೆ. ಅದರ ಪ್ರಕಾರ ಬರುವ ಮೇ ತಿಂಗಳ ೫ಕ್ಕೆ ಕರ್ನಾಟಕ ರಾಜ್ಯ ವಿಧಾನಸಭೆಗೆ ಚುನಾವಣೆ ನಡೆಯಲಿದೆ. ೨೦೧೪ರಲ್ಲಿ ದೇಶದ ಲೋಕಸಭೆಗೆ ಮಹಾ ಚುನಾವಣೆ ನಡೆಯಲಿದೆ. ಇತ್ತೀಚೆಗೆ ತಾನೆ ರಾಜ್ಯದ ಸ್ಥಳೀಯ ಸಂಸ್ಥೆಗಳಿಗೆ ಚುನಾವಣೆ ನಡೆದಿತ್ತು. ಚುನಾವಣೆಗಳನ್ನು ಪ್ರಜಾಪ್ರಭುತ್ವದ ಸದ್‌ಲಕ್ಷಣ ಎಂದೆ ತಿಳಿಯಲಾಗುತ್ತದೆ. ಚುನಾವಣೆಗಳಿಲ್ಲದ ದೇಶವನ್ನು ಯಾರು ಮನ್ನಿಸುವುದಿಲ್ಲ. ಆದರೆ ಈ ಚುನಾವಣೆಗಳು ದೇಶದ ಮತದಾರರಾದ ಜನತೆಯನ್ನು ಕಗ್ಗತ್ತಲೆಯ ಗವಿಯೊಳಗೆ ನೂಕುವ ಕೆಲಸವನ್ನು ಮಾಡುತ್ತವೆ. ಹೀಗೆ ಹೇಳಲು ಕಾರಣವೇನೆಂದರೆ ಚುನಾವಣೆಯನ್ನು ಏರ್ಪಡಿಸುವ ಚುನಾವಣಾ ಆಯೋಗ ಯಂತ್ರವತ್ತಾಗಿ ಕೆಲಸ ಮಾಡುತ್ತದೆ. ಯಾವ ಹೊತ್ತಿಗೆ ಯಾವ ಸರಕಾರದ ಅವಧಿ ಮುಗಿಯುತ್ತದೋ ಆ ಹೊತ್ತಿಗೆ ಸರಿಯಾಗಿ ಚುನಾವಣೆ ಏರ್ಪಡಿಸುವುದು ಆಯೋಗದ ಕರ್ತವ್ಯವಾಗಿರುತ್ತದೆ. ಸರಕಾರ ಒಳ್ಳೆಯದಾಗಿ ಕೆಲಸ ಮಾಡಿದರೂ ಅಷ್ಟೆ, ಕೆಲಸ ಮಾಡದಿದ್ದರೂ ಅಷ್ಟೆ ಅದನ್ನು ವಜಾಮಾಡಿ ಆ ಸ್ಥಾನಕ್ಕೆ ಹೊಸ ಸರಕಾರ ಬರುವಂತೆ ಮಾಡುತ್ತದೆ. ಇದು ಒಳ್ಳೆಯ ಸರಕಾರ ಇನ್ನೂ ೬ ತಿಂಗಳು ಕೆಲಸ ಮಾಡಲಿ ಎಂದಾಗಲಿ, ಈ ಸರಕಾರ ಸರಿ ಇಲ್ಲ ಇದನ್ನು ೨ ತಿಂಗಳ ಮೊದಲೆ ವಜಾಮಾಡಿರಿ ಎಂದಾಗಲಿ ಮತದಾರರು ಕೂಗಿದರೂ ಚುನಾವಣಾ ಆಯೋಗ ಕಿವುಡನಂತೆ ವರ್ತಿಸುತ್ತದೆ; ಮತ್ತು ವಿಧಿವತ್ತಾಗಿ ಇರುವ ಸರಕಾರವನ್ನು ವಜಾಮಾಡಿ ಹೊಸ ಸರಕಾರಕ್ಕಾಗಿ ಚುನಾವಣೆಯನ್ನು ಏರ್ಪಡಿಸುತ್ತದೆ. ಹಳೆಯ ಸರಕಾರ ಹೋಗುವುದಕ್ಕು, ಹೊಸ ಸರಕಾರ ಬರುವುದಕ್ಕು ಪ್ರಜೆಗಳ ಅಭಿಪ್ರಾಯ ಶೂನ್ಯವಾಗಿರುತ್ತದೆ. ಚುನಾವಣೆ ಬಂದಿದೆ ಮತ ಹಾಕಿ ಎಂದು ಆಯೋಗ ಹೇಳಿದರೆ ಮತದಾರರು ಮತ ಹಾಕಲೆ ಬೇಕು. ಇದನ್ನು ಪ್ರಜಾಪ್ರಭುತ್ವ ಎಂದು ಕರೆಯುತ್ತಾರೆ. ಚುನಾವಣಾ

ಆಯೋಗಕ್ಕೆ ರಾಷ್ಟ್ರ ನಿರ್ಮಾಣದ ಕಲ್ಪನೆ ಇರುವುದದಿಲ್ಲ. ರಾಜಕೀಯ ಪಕ್ಷಗಳಿಗೂ ಇರುವುದಿಲ್ಲ, ಮತದಾರರಿಗೂ ಇರುವುದಿಲ್ಲ. ಯಾವ ಪ್ರಕಾರದ ರಾಷ್ಟ್ರನಿರ್ಮಾಣಕ್ಕಾಗಿ ಈ ಚುನಾವಣೆ ನಡೆಯುತ್ತದೆ ಎಂಬುದು ಸಂಬಂಧಪಟ್ಟವರಿಗೆ ಗೊತ್ತಿಲ್ಲ. ಆದ್ದರಿಂದಲೆ ಈ ಚುನಾವಣೆಗಳು ಮತದಾರರನ್ನು ಕಗ್ಗತ್ತಲೆಯ ಗವಿಯೊಳಗೆ ನೂಕುವ ಒಂದು ಪ್ರಕ್ರಿಯೆ ಎಂದೆ ಹೇಳಬೇಕಾಗುತ್ತದೆ. ಸ್ವಾತಂತ್ರ ಬಂದಾಗಿನಿಂದ ನಡೆದ ಚುನಾವಣೆಗಳ ಸಂದರ್ಭದಲ್ಲಿ ರಾಜಕೀಯ ಪಕ್ಷಗಳು ಪ್ರಕಟಪಡಿಸಿದ್ದ ಪ್ರಣಾಳಿಕೆಗೂ ಸಧ್ಯದ ದೇಶದ ಪರಿಸ್ಥಿತಿಗೂ ಯಾವುದೆ ಸಂಬಂಧ ಇಲ್ಲದಿರುವಂತೆ ಕಾಣುತ್ತದೆ. ಚುನಾವಣೆಗಾಳಾದರೂ ಸಮರ್ಪಕವಾಗಿ ನಡಿಯುವುದಿಲ್ಲ. ರಾಜಕೀಯ ಪಕ್ಷಗಳು ಚುನಾವಣಾ ನೀತಿ ಸಂಹಿತೆಯನ್ನು ಮುರಿದು ಚುನಾವಣೆಯಲ್ಲಿ ಸ್ಪರ್ಧಿಸುತ್ತವೆ. ಅಲ್ಲದೆ, ಚುನಾವಣೆಯಲ್ಲಿ ಅಭ್ಯರ್ಥಿಗಳ ನೈತಿಕತೆ, ಸಾಮರ್ಥ್ಯ ಮುಂತಾದ ಗುಣಗಳು ಗಣನೆಗೆ ಬರುವುದಿಲ್ಲ. ಗಣನೆಗೆ ಬರುವುದು ಜಾತಿ ಮತ್ತು ಧರ್ಮಗಳಲ್ಲದೆ ಸುರಾಪಾನ, ಹಣದ ಆಮಿಷ, ಇನ್ನಿತರ ಆಮಿಷಗಳು. ಪಕ್ಷದ ಅಭ್ಯರ್ಥಿಗಳೆ ಅಪರಾಧಿಗಳು ಮತ್ತು ಸಾಮಾಜಿಕವಾಗಿ ಅನೈತಿಕ ವ್ಯಕ್ತಿಗಳಾಗಿರುತ್ತಾರೆ. ಮತದಾರರಿಗೆ ಎಲ್ಲಾ ರಾಜಕೀಯ ಪಕ್ಷಗಳ ಪ್ರಣಾಳಿಕೆಯ ತಿಳುವಳಿಕೆ ಇರುವುದಿಲ್ಲ. ಯಾವ ಪಕ್ಷ ಪ್ರಣಾಳಿಕೆ ಬೇರೊಂದು ಪಕ್ಷದ ಪ್ರೆಣಾಳಿಕೆಗಿಂತ ಚೆನ್ನಾಗಿದೆ ಎಂಬ ಹೊಲಿಕೆ ಗೊತ್ತಿರುವುದಿಲ್ಲ. ಚುನಾವಣೆಗೆ ನಿಂತ ಅಭ್ಯರ್ಥಿಗಳು ಸ್ವತಂತ್ರವಾಗಿ ಇರದೆ ತಮ್ಮ ತಮ್ಮ ಪಕ್ಷಗಳ ಕೈಗೊಂಬೆಯಾಗಿರುತ್ತಾರೆ. ಅಭ್ಯರ್ಥಿಗಳು ಮತದಾರರಿಗೆ ಸ್ವತಂತ್ರವಾಗಿ ತಮ್ಮ ಅಭಿಪ್ರಾಯವನ್ನು ತಿಳಿಸಲಾರರು ಏಕೆಂದರೆ ಅವರು ಸ್ವತಂತ್ರವಾಗಿ ಓರ್ವ ವ್ಯಕ್ತಿಯಾಗಿ ತಾನು ಕೊಟ್ಟ ಭರವಸೆಯನ್ನು ಕಾರ್ಯರೂಪಕ್ಕೆ ತರಲು ಸಾಧ್ಯವಾಗುವುದಿಲ್ಲ. ಪಕ್ಷದ ನೀತಿಗೆ ಮತ್ತು ಸ್ಥಿತಿಗೆ ಬದ್ಧರಾಗಿರಲೇಬೇಕಾಗುತ್ತದೆ. ರಾಜಕೀಯ ಪಕ್ಷ ಒಂದೆ ಮಾತಿಗೆ ಬದ್ಧವಾಗಿ ಇರುವುದಿಲ್ಲ. ಚುನಾವಣೆ ಆದ ಮೇಲೆ ರಾಜಕೀಯ ಪಕ್ಷಗಳು ತಮ್ಮ ಪ್ರಣಾಳಿಕೆಗೆ ಬದ್ಧವಾಗಿರದೆ ಕಾಲಕ್ಕೆ ತಕ್ಕಂತೆ ತಾಳ ಹಾಕುತ್ತವೆ. ಭಾರತ ಬಹುದೊಡ್ಡ ದೇಶವಾಗಿರುವುದರಿಂದ ಹಾಗೂ ಜನಸಂಖ್ಯೆ ೧೩೦ ಕೋಟಿಗೂ ಮಿಕ್ಕಿ ಇರುವುದರಿಂದ ಮತದಾರರಲ್ಲಿ ಏಕಾಭಿಪ್ರಾಯ ರೂಪಿಸುವುದು ಕಷ್ಟ ಸಾಧ್ಯವಾಗುತ್ತದೆ. ಕರ್ನಾಟಕದಲ್ಲಿ ಈಗ ನಾಲ್ಕು ಕೋಟಿಗೂ ಹೆಚ್ಚು ಮತದಾರರು ಇದ್ದಾರೆ. ಇಷ್ಟು ದೊಡ್ಡ ಸಂಖ್ಯೆಯ ಮತದಾರರಲ್ಲಿ ಏಕಿಭಾವ ಮೂಡಿಸುವುದು ಸಾಧ್ಯವಿಲ್ಲ.

ಆದ್ದರಿಂದ ಚುನಾವಣೆಯ ನಂತರದ ಫಲಿತಾಂಶ ದೇಶದ ನಿರ್ಮಾಣಕ್ಕೆ ಸಹಕಾರಿ ಆಗಿರುವುದಿಲ್ಲ. ಚುನಾವಣೆಯ ಕಾಲದಲ್ಲಿ ಮತದಾರರ ಮನ ಮತ್ತು ಮನೆ ಮತ್ತು ನೆಲೆ ಖಂಡಿತವಾಗಿರುತ್ತದೆ. ಅದ್ದರಿಂದ ಚುನಾವಣೆಯ ಮೊದಲು ಇದ್ದ ಸಮಸ್ಯೆಗಳಿಗಿಂತ, ಪ್ರಶ್ನೆಗಳಿಗಿಂತ ಹೆಚ್ಚು ಸಮಸ್ಯೆಗಳು ಮತ್ತು ಪ್ರಶ್ನೆಗಳು ಚುನಾವಣೆಯ ನಂತರ ಉದ್ಭವಿಸುತ್ತವೆ. ಇಲ್ಲದಿರುವ ಹೊಸ ಸಮಸ್ಯೆಗಳನ್ನು ನಿರ್ಮಿಸುವುದಕ್ಕಾಗಿಯೆ ಚುನಾವಣೆ ನಡಿಯುತ್ತದೇನೊ ಎಂದು ಅನಿಸುತ್ತದೆ.

ರಾಜಕೀಯಪಕ್ಷಗಳೆಲ್ಲವೂ ಅಪಮೌಲ್ಯಗೊಂಡಿರುವುದರಿಂದ ಸತ್ಯ ಮತ್ತು ಅಹಿಂಸೆಯಂಥ ಮೌಲ್ಯಾಧಾರಿತ ಸಮಾಜವನ್ನು ಸೃಷ್ಟಿಸಲಾರವು. ಇದುವರೆಗೆ ಈ ಮೌಲ್ಯಗಳ ಆಧಾರಿತ ಸಮಾಜ ನಿರ್ಮಾಣವಾಗದೆ ಇರುವುದರಿಂದ ಈಗ ನಾವು ಸಮಾಜದಲ್ಲಿ ಅಸತ್ಯ, ಅನೀತಿ ಮತ್ತು ಹಿಂಸೆ ಹೆಚ್ಚಾಗಿ ಕಾಣುತ್ತಿದ್ದೇವೆ. ಒಂದು ಸಮಾಜದ ಅಸ್ತಿತ್ವಕ್ಕೆ ಮೂಲವಾದ ನಾಗರಿಕತೆ ಇಂದಿನ ಸಮಾಜದಿಂದ ಕಣ್ಮರೆಯಾಗುತ್ತಿದೆ. ಒಂದು ಅರ್ಥದಲ್ಲಿ ನಾಗರಿಕ ಸಮಾಜವು ಅನಾಗರಿಕವಾಗುತ್ತಿದೆ. ನಮ್ಮ ದೇಶದ ಲಾಂಛನದಲ್ಲಿ 'ಸತ್ಯಮೇವಜಯತೇ' ಎಂಬ ಉದ್ಘೋಷವಿದೆ. ಅದರೆ ದೇಶದಲ್ಲಿ ಭ್ರಷ್ಟಾಚಾರ, ಅತ್ಯಾಚಾರ, ಅನಾಚಾರ ಮುಂತಾದವು ಎಷ್ಟೊಂದು ದೊಡ್ಡ ಪ್ರಮಾಣದಲ್ಲಿ ಇದೆ ಎಂದರೆ ಲಾಂಛನದಲ್ಲಿಯ ಆ ಉದ್ಘೋಷವನ್ನು 'ಅಸತ್ಯಮೇವ ಜಯತೇ' ಎಂದು ಮಾಡಬೇಕಾಗುತ್ತದೆ. ಇಂದಿನ ಯಾವ ರಾಜಕೀಯ ಪಕ್ಷವೂ ಮೌಲ್ಯಾಧಾರಿತ ಸಮಾಜವನ್ನು ತಾನು ಸೃಷ್ಟಿಸಲು ಪ್ರಯತ್ನಿಸುವುದಾಗಿ ಹೇಳುವುದಿಲ್ಲ. ಅದಕ್ಕೆ ಬದಲಾಗಿ ಆಧುನಿಕ ಅಭಿವೃದ್ಧಿಯ ಮಾತನ್ನಾಡುತ್ತವೆ. ಈ ಆಧುನಿಕ ಅಭಿವೃದ್ಧಿ ಎಂಬುವುದು ಮರೀಚಿಕೆಯಂತಿದೆ. ಭಸ್ಮಾಸುರಸಂತೆ ಅಭಿವೃದ್ಧಿ ಮುಟ್ಟಿದ್ದೆಲ್ಲವೂ ಬೂದಿಯಾಗುತ್ತದೆ. ನಮಗೆ ಇಂದು ಬೇಕಾಗಿರುವುದು ಸುಧಾರಣೆ ಹೊರತು, ಅಭಿವೃದ್ಧಿಯಲ್ಲ. ಸುಧಾರಣೆಯ ಪ್ರಕ್ರಿಯೆಯಲ್ಲಿ ಹಳೆಯ ಸಂಗತಿಯಾದರೂ ಅಧು ಒಳ್ಳೆಯ ಮತ್ತು ಉಪಯುಕ್ತಕರವಾಗಿದ್ದರೆ. ಅದನ್ನು ಉಳಿಸಿ ಅದಕ್ಕಿಂತಲೂ ಉತ್ತಮವಾದ ಸಂಗತಿಯನ್ನು ಸೇರಿಸಿಕೊಳ್ಳುತ್ತಾ ಸುಧಾರಣೆ ಸಾಗುತ್ತದೆ. ಅಭಿವೃದ್ಧಿ ಹಳೆಯದನ್ನು ಸಂಪೂರ್ಣವಾಗಿ ಕಿತ್ತುಹಾಕಿ ಅದರ ತಳದಲ್ಲಿ ಹೊಸದನ್ನು ಸೇರಿಸುತ್ತದೆ. ಈ ಕಾರಣದಿಂದಾಗಿ ಎಲ್ಲೆಲ್ಲಿ ಅಭಿವೃದ್ಧಿಯೆಂಬ ಕ್ರಿಯೆ ನಡೆದಿದೆಯೋ ಅಲ್ಲೆಲ್ಲಾ ಹಳ್ಳಿಗಳು ನಾಶವಾಗಿವೆ. ವಾತಾವರಣ ಕಲುಷಿತವಾಗಿದೆ. ಪರಿಸರ

ಹಾಳಾಗಿದೆ. ಪ್ರಕೃತಿ ಹಾಳಾಗಿದೆ. ಮತ್ತು ದಿನೇದನೇ ಕೃಷಿಯ ಕ್ಷೇತ್ರ ಕಡಿಮೆಯಾಗುತ್ತಿದೆ. ಇಂತಹ ವಿನಾಶಕಾರಿ ಅಭಿವೃದ್ಧಿಯ ವಿಚಾರವನ್ನು ಎಲ್ಲ ರಾಜಕೀಯ ಪಕ್ಷಗಳು ಹೇಳುತ್ತವೆ. ಅಭಿವೃದ್ಧಿಯ ವಿಷಯ ತಿಳಿಸಲು ಅವುಗಳಲ್ಲಿ ಪೈಪೋಟಿಯಿದೆ. ಹೀಗಾಗಿ ಅಭಿವೃದ್ಧಿಯೆಂದರೇನು ಎಂಬ ಬಗ್ಗೆ ಸ್ಪಷ್ಟವಾದ ವ್ಯಾಖ್ಯೆ ಇರುವುದಿಲ್ಲ. ರಾಜಕೀಯ ನಾಯಕರು ತನ್ನ ಇಷ್ಟಾನುಸಾರ ಅಭಿವೃದ್ಧಿಯ ವ್ಯಾಖ್ಯೆ ಮಾಡುತ್ತಾರೆ. ಆದ್ದರಿಂದಲೇ ಮೋದಿ ಮಾದರಿಯ ಅಭಿವೃದ್ಧಿ, ಯಡಿಯೂರಪ್ಪ ಮಾದರಿಯ ಅಭಿವೃದ್ಧಿ, ಮನಮೋಹನ್‌ಸಿಂಗ್ ಮಾದರಿಯ ಅಭಿವೃದ್ಧಿ, ಇಂದಿರಾಗಾಂಧಿ ಮಾದರಿಯ ಅಭಿವೃದ್ಧಿ ಎಂಬಂಥ ಅನೇಕ ಮಾದರಿಗಳು ಹುಟ್ಟಿಕೊಂಡು ಭಾರತದೇಶವನ್ನು ಹಾಳುಮಾಡುತ್ತಿವೆ. ಜನತೆಯ ದಿಕ್ಕನ್ನು ತಪ್ಪಿಸುತ್ತಿವೆ. ಇದೆಲ್ಲ ಸಾಲದೆಂಬಂತೆ ಪ್ರತಿಯೊಂದು ರಾಜಕೀಯ ಪಕ್ಷವೂ ಮುಖ್ಯವಾಗಿ ರಾಷ್ಟ್ರಮಟ್ಟದಲ್ಲಿಯ ಪಕ್ಷಗಳು ದೇಶದ ಮಿಲಿಟರಿ ಶಕ್ತಿಗಾಗಿ ಅಪಾರವಾದ ಹಣವನ್ನು ಮೀಸಲಾಗಿಡುತ್ತವೆ. ೨೦೧೩-೧೪ರ ಬಜೆಟ್‌ನಲ್ಲಿ ಕಾಂಗ್ರೆಸ್ ಪಕ್ಷ ಒಂದು ಸಾವಿರ ಕೋಟಿ ರೂಪಾಯಿಯನ್ನು ರಕ್ಷಣಾ ವ್ಯವಸ್ಥೆಗೆ ಮೀಸಲಾಗಿಟ್ಟಿದೆ. ಚೀನಾ ಮತ್ತು ಪಾಕಿಸ್ತಾನದಂಥ ದೇಶಗಳೊಂದಿಗೆ ಈ ವಿಷಯದಲ್ಲಿ ಪೈಪೋಟಿಮಾಡುತ್ತವೆ. ಬಂದಿರುವ ಮತ್ತು ಬರಲಿರುವ ಚುನಾವಣೆಗಳು ದೇಶವನ್ನು ಯಾವ ದಿಕ್ಕಿನತ್ತ ಒಯ್ಯುತ್ತವೆ ಎಂದು ಹೇಳಲು ಯಾರಿಗೂ ಸಾಧ್ಯವಿಲ್ಲವಾಗಿದೆ. ಇಂಥ ಸಂದರ್ಭದಲ್ಲಿ ಮತದಾರರಾಗಿರುವ ದೇಶದ ಜನಗಳ ಮೇಲೆ ಬಹಳ ದೊಡ್ಡ ಜವಾಬ್ದಾರಿ ಇದೆ. ಕೇವಲ ಮತಗಟ್ಟೆಗಳಿಗೆ ಯಂತ್ರವತ್ತಾಗಿ ಹೋಗಿ ಕಂಡವರ ಹೆಸರಿನ ಮುಂದೆ ಮತದ ಮುದ್ರೆಯನ್ನು ಒತ್ತಿ ಬರುವದಾಗಿರದೆ ದೇಶದ ಹಿತವನ್ನು ಕುರಿತು ಗಂಭೀರವಾಗಿ ಆಲೋಚನೆ ಮಾಡಿ ಸರಿಯಾದ ರಾಜಕೀಯ ಪಕ್ಷಕ್ಕೆ ಮತವನ್ನು ಹಾಕಬೇಕಿದೆ. ಚುನಾವಣಾ ಕಾಲದಲ್ಲಿ ಪ್ರಾದೇಶಿಕವಾಗಿ ನಾಯಿಕೊಡೆಗಳಂತೆ ಹುಟ್ಟುವ ರಾಜಕೀಯ ಪಕ್ಷಗಳಿಗೆ ಪ್ರನಾಳಿಕೆ ಎಂಬುದೇ ಇರುವುದಿಲ್ಲ. ಯಾವ ಪ್ರಕಾರದ ಆಡಳಿತವನ್ನು ತಾವು ಕೊಡಬಹುದು ಎಂಬುವುದರ ಬಗ್ಗೆ ಅವುಗಳಿಗೆ ಗೊತ್ತಿರುವುದಿಲ್ಲ. ಎಲ್ಲ ಪ್ರಮುಖ ವಿಷಯಗಳಲ್ಲಿ ಅವು ಕುರುಡಾಗಿರುತ್ತವೆ. ಅಂಥ ಕುರುಡು ಪಕ್ಷಗಳು ಕುರುಡಾಗಿರುವ ಮತದಾರರಿಗೆ ಯಾವ ದಾರಿ ತೋರಿಸಬಲ್ಲವು? ಇಂದಿನ ಕೆಲ ರಾಜಕೀಯ ಪಕ್ಷಗಳು ಕೋಮು ಆಧಾರಿತ ಗುಂಪುಗಳಾಗಿವೆ. ಯಾವುದೋ ಒಂದು ಕೋಮಿನ ಹಿತವನ್ನು

ಮಾತ್ರ ಬಯಸುತ್ತವೆ. ಒಂದು ಪಕ್ಷವಂತೂ ಅಲ್ಪಸಂಖ್ಯಾತರೆಂಬ ಹೆಸರಲ್ಲಿರುವ ಒಂದು ಕೋಮಿನ ಜನರನ್ನು ಓಲೈಸುವುದನ್ನು ಪರಿಪಾಠವನ್ನಾಗಿ ಮಾಡಿಕೊಂಡಿದೆ. ಇನ್ನು ಕೆಲವು ಪಕ್ಷಗಳು ಕಾರ್ಮಿಕರ ಹಿತವನ್ನು ಬಯಸುತ್ತಾ ಮತ ಪಡೆಯಲು ಪ್ರಯತ್ನಮಾಡುತ್ತವೆ. ಇನ್ನು ಕೆಲವು ಪಕ್ಷಗಳ ಸದಸ್ಯರು ಕಾಡಿನಲ್ಲಿ ಅವಿತುಕೊಂಡು ಬಂದೂಕು ಹಿಡಿದುಕೊಂಡು ಅಮಾಯಕರನ್ನು ಬಲಿಕೊಡುತ್ತಲೇ ಇರುತ್ತದೆ. ಮತ್ತು ಚುನಾವಣೆಗಳು ಬಂದಾಗ ಮತ ಪಡೆದು ಶಾಸನಸಭೆಗಳಿಗೆ ಹೋಗಲು ಪ್ರಯತ್ನಿಸುತ್ತವೆ. ನಿಜ ಹೇಳಬೇಕೆಂದರೆ ಎಲ್ಲ ಪಕ್ಷಗಳು ತಮ್ಮ ತಮ್ಮ ಹಸಿಹಸಿ ರಾಜಕೀಯ ಸಿದ್ಧಾಂತದ ಬಗ್ಗೆ ಮಾತನಾಡುತ್ತವೆಯೇ ಹೊರತು, ಚುನಾವಣೆಯಲ್ಲಿ ಸ್ಪರ್ಧಿಸುತ್ತವೆಯೇ ಹೊರತು ಭಾರತದೇಶದ ಒಟ್ಟು ಒಳಿತಿನ ಬಗ್ಗೆ ಯಾವ ಪಕ್ಷವೂ ಯೋಚನೆ ಮಾಡುವುದಿಲ್ಲ. ತಮ್ಮ ಪಕ್ಷದ ಹಿತ ಬೇರೆ, ದೇಶದ ಹಿತ ಬೇರೆ ಎಂಬ ದ್ವೈತ ಭಾವನೆಯನ್ನು ಬೆಳೆಸಿಕೊಂಡಿವೆ. ಗಾಂಧೀಜಿಯವರು ನಮ್ಮ ದೇಶಕ್ಕೆ ಕೇವಲ ಸ್ವಾತಂತ್ರ್ಯ ಬಯಸಿರಲಿಲ್ಲ. ಅವರು ಬಯಸಿದ್ದು–ಸ್ವರಾಜ್ಯ. ಅಂದರೆ ದೇಶದ ಪ್ರತಿಯೊಬ್ಬ ವ್ಯಕ್ತಿಯೂ ಆತ್ಮನಿಯಂತ್ರಣದೊಂದಿಗೆ ಸ್ವತಂತ್ರ್ಯನಾಗಿದ್ದು ತನ್ನ ಭವಿಷ್ಯವನ್ನು ತಾನೇ ರೂಪಿಸಿಕೊಳ್ಳಬೇಕೆಂಬುವುದು ಅವರ ಕಲ್ಪನೆಯಾಗಿತ್ತು. ಯಾವ ರೀತಿ ಮಾರ್ಕ್ಸ್ ಮತ್ತು ಲೆನಿನ್‌ರಂಥವರು ಸರ್ಕಾರದ ಕಣ್ಮರೆಯ ಸ್ಥಿತಿಯನ್ನು ಹೇಳಿದರೊ ಅದೇ ಪ್ರಕಾರದ ಸ್ಥಿತಿಯನ್ನು ಗಾಂಧೀಯವರು ಹೇಳಿದರು. ಸರ್ಕಾರವೆಂಬುವುದು ಇಲ್ಲವಾಗಿ ಆತ್ಮಸಂಯಮ ಮತ್ತು ಶಿಸ್ತಿನಿಂದ ಲೋಕವ್ಯವಹಾರವನ್ನು ನಡೆಸುವಂಥ ಸಮಾಜದ ಸೃಷ್ಟಿಗಾಗಿ ಗಾಂಧೀ ಶ್ರಮಿಸಿದರು. ಅದನ್ನೇ ಅವರು ಸರ್ವೋದಯ ಸಮಾಜ ಎಂದು ಕರೆದರು. ಆದರೆ ಇಂದಿನ ರಾಜಕೀಯ ಪಕ್ಷಗಳು ಸರ್ವೋದಯ ಸಿದ್ಧಾಂತದಲ್ಲಿರುವ ತತ್ವಗಳನ್ನು ಮರೆತು ಸರ್ವವಿನಾಶದ ನೀತಿಯನ್ನು ಅನುಸರಿಸುತ್ತಿವೆ. ಅಂದರೆ ದೇಶವನ್ನು ಕಗ್ಗತ್ತಲೆಯ ಗವಿಯೊಳಗೆ ನೂಕುತ್ತಿವೆ. ಆದ್ದರಿಂದ ಅಂಥ ಗುಹೆಯೊಳಗೆ ತಾವು ನೂಕಲ್ಪಡದಂತೆ ಜನರು ತುಂಬಾ ಎಚ್ಚರದಿಂದ, ತಿಳುವಳಿಕೆಯಿಂದ ಮತಚಲಾಯಿಸಬೇಕು. ಸಾಧ್ಯವಾದಷ್ಟೂ ಸರ್ವೋದಯ ಸಮಾಜದ ರಚನೆಗೆ ಪ್ರತ್ಯಕ್ಷವಾಗಾಗಲೀ, ಅಪ್ರತ್ಯಕ್ಷವಾಗಾಗಲೀ ಅಲ್ಪಸ್ವಲ್ಪವಾದರೂ ಶ್ರಮಿಸಬಹುದಾದ ವ್ಯಕ್ತಿಗಳಿಗೆ ಅಥವಾ ಪಕ್ಷಗಳಿಗೆ ಮತಕೊಡಬೇಕು.

* * *

ರವೀಂದ್ರನಾಥ ಟ್ಯಾಗೋರ್‌ರ ವಿಶ್ವಾತ್ಮಕತೆ

– ಎಚ್.ಎಸ್.ಶಿವಪ್ರಕಾಶ್

ಈ ತಿಂಗಳ ಹಿಂದೆ ದೆಹಲಿಯ ಐ.ಸಿ.ಸಿ.ಆರ್ ಮತ್ತು ಜರ್ಮನಿಯ ಹಾಲೆ–ಉಟಿನ್‌ಬರ್ಗ್‌ನ ಮಾರ್ಟಿನ್ ಲೂಥರ್ ವಿಶ್ವವಿದ್ಯಾಲಯದ ಜಂಟಿ ಆಯೋಜನೆಯಲ್ಲಿ ಜರ್ಮನಿಯ ಭಾರತೀಯ ರಾಜದೂತಾವಾಸದ ನೆರವಿನಿಂದ ರವೀಂದ್ರನಾಥ ಟ್ಯಾಗೋರ್‌ರ ಕುರಿತ ಒಂದು ಅಂತರಾಷ್ಟ್ರೀಯ ವಿಚಾರ ಗೋಷ್ಠಿಯನ್ನೇರ್ಪಡಿಸಲಾಗಿತ್ತು. ಭಾರತದ ಆರು ಜನ ವಿದ್ವಾಂಸರು, ಜರ್ಮನಿ ಮತ್ತು ಯೂರೋಪಿನ ಇತರ ರಾಷ್ಟ್ರಗಳ ಒಟ್ಟು ಹನ್ನೆರಡು ಜನ ವಿದ್ವಾಂಸರು ಅಂದು ಟ್ಯಾಗೋರ್‌ರ ಪ್ರಸ್ತುತತೆಯನ್ನು ಕುರಿತು ವಿಸ್ತಾರವಾಗಿ ಚರ್ಚಿಸಿದರು. ಕಳೆದ ಒಂದು ವರ್ಷಕ್ಕಿಂತಲೂ ಹೆಚ್ಚಿನ ಅವಧಿಯಲ್ಲಿ ಭಾರತ ಸರ್ಕಾರ ಆಚರಿಸುತ್ತಾ ಬಂದ ಟ್ಯಾಗೂರ್‌ರ ೧೫೦ನೇ ವರ್ಷದ ಆಚರಣೆಯ ಅಂತಿಮ ಕಾರ್ಯಕ್ರಮವನ್ನಾಗಿ ಏರ್ಪಡಿಸಿದ ಈ ವಿಚಾರಗೋಷ್ಠಿಯ ವಿಶೇಷವೆಂದರೆ ಆ ಆಚರಣೆಗಳ ತೆರೆಯೆಳೆಯುವ ಬದಲಿಗೆ ಟ್ಯಾಗೋರ್‌ರ ಕುರಿತ ಚಿಂತನೆಯ ಹೊಸ ದೆಶೆಯ ಆರಂಭವಾಗಿ ಮಾರ್ಪಟ್ಟಿತು. ಯಾಕೆಂದರೆ ಟ್ಯಾಗೋರ್‌ರ ಬದುಕು ಮತ್ತು ಅರ್ಥವಂತಿಕೆ ಎಷ್ಟು ಶ್ರೀಮಂತವಾದವೆಂದರೆ 'ಆಗೆವ ಬುದ್ಧಿಗಿಲ್ಲುಂಟು ಅನಂತ ಅವಕಾಶ.'

ಟ್ಯಾಗೋರ್‌ರ ಸಾಹಿತ್ಯ ಸೃಷ್ಟಿ ವಿಪುಲ. ಸುಮಾರು ಹದಿನೆಂಟು ಸಾವಿರ ಪುಟಗಳಲ್ಲಿ ಹಲವಿಧದ ಸಾಹಿತ್ಯ ಪ್ರಕಾರಗಳನ್ನು ಅವರು ಸಮೃದ್ಧಗೊಳಿಸಿದ್ದಾರೆ. ಆದರೆ ಅವರ ಬರವಣಿಗೆ ಕೇವಲ ಸೃಜನಶೀಲ ಸಾಹಿತ್ಯ ಪ್ರಕಾರಗಳನ್ನು ಅವರು ಸಮೃದ್ಧಗೊಳಿಸಿದ್ದಾರೆ. ಆದರೆ ಅವರ ಬರವಣಿಗೆ ಕೇವಲ ಸೃಜನಶೀಲ ಸಾಹಿತ್ಯಕ್ಕೆ ಮೀಸಲಾಗಿರಲಿಲ್ಲ. ದರ್ಶನದ ಬಗ್ಗೆ, ಸಂಸ್ಕೃತಿ, ಇತಿಹಾಸಗಳ ಬಗ್ಗೆ, ಶಿಕ್ಷಣದ ಬಗ್ಗೆ ಅವರು ಮುಟ್ಟಿ ಹೊಸದಾಗಿಸದ ವಿಷಯವೇ ಇಲ್ಲ. ಅಲ್ಲದೆ ಅವರು ತಮ್ಮದೇ ಆದ ರಂಗಮಂಚವನ್ನು ನಿರ್ಮಿಸಿದರು. ಹೊಸರೀತಿಯ ಸಂಗೀತವನ್ನು ಸೃಜಿಸಿದರು. ಎಪ್ಪತ್ತರ ಮುಪ್ಪಿನ ನಂತರ ಚಿತ್ರಕಲಾವಿದರಾಗಿ ಮರುಜನ್ಮ ಪಡೆದರು. ಅಕ್ಷಯಪಾತ್ರೆಯ ಹಾಗೆ ಕೊನೆತನಕ ಅವರ ಪ್ರತಿಭೆ ನವನವೋನ್ಮೇಶಶಾಲಿಯಾಗಿ ಮುಂದುವರಿಯುತ್ತಿತ್ತು. ಜರಾಸಂಕೋ ಎಂಬ ಊರಿನಲ್ಲಿ ವಿದ್ವತ್ತು ಮತ್ತು ಪ್ರತಿಭೆಗಳಿಗೆ ಆಗರವಾಗಿದ್ದ ಅವರ ಮನೆಯ ವಾತಾವರಣವೊಂದೇ ಅದ್ಭುತ ಸೃಜನಪ್ರತಿಭೆಗೆ ಸಾಕಾಗಿರುತ್ತಿತ್ತು. ಆದರೆ ಟ್ಯಾಗೋರ್‌ರು ಇತ್ತುಗಳ ಧ್ವಜವನ್ನು ಹಿಡಿದೆತ್ತುವ ಕೆಲಸವನ್ನೊಂದೇ ಮಾಡಲಿಲ್ಲ. ಹುಟ್ಟಾ ಅನ್ವೇಷಕ ಪ್ರತಿಭೆ ಅವರದಾದ್ದರಿಂದ ಜಗತ್ತಿನಾದ್ಯದಂತ ಸಂಚರಿಸಿ ಪೂರ್ವಪಶ್ಚಿಮವೆನ್ನದೆ ತಮ್ಮ ಯುಗದ ಮಹಾನ್ ಚೇತನಗಳಾದ ಐನ್‌ಸ್ಟೈನ್‌ರಂಥ ಅನೇಕರ ಜೊತೆ ವಿಚಾರ ವಿನಿಮಯ ಮಾಡಿಕೊಂಡು ತಮ್ಮ ವಿಚಾರ ಮತ್ತು ಕಲೆಗಳನ್ನು

ಸಂಕುಚಿತ ರಾಷ್ಟ್ರೀಯತೆಯಿಂದ ಬಿಡುಗಡೆಗೊಳಿಸಿ ಅದಕ್ಕೊಂದು ವಿಶ್ವಾತ್ಮಕತೆಯನ್ನು ನೀಡಿದರು. ಭಾರತದ ಮಹಾ ಮಾನವಸಾಗರದಪಾರ ತೀರದಲ್ಲಿ ನಿಂತು ಇಡೀ ಏಷಿಯಾದ, ಇಡೀ ವಿಶ್ವದ ಐಕ್ಯತೆಯ ಕನಸು ಕಂಡು ಅದರ ಸಾರೋದ್ಧಾರವನ್ನು ತಮ್ಮ ರಸವತ್ತಾದ ವಿವಿಧ ಸೃಜನನಿರ್ಮಿತಿಗಳ ಮೂಲಕ ಹೊರಪಡಿಸಿದರು.

ಹೀಗೆ ಬಹುಮುಖಿಯಾದ ಟ್ಯಾಗೋರ್‌ರ ಪ್ರತಿಭೆಯನ್ನು ಲಿಯನಾರ್ಡೋ ಡಾ ವಿಂಚಿಗೆ, ಷೇಕ್ಸ್‌ಪಿಯರನಿಗೆ, ಡಾಂಟೆಗೆ, ಗಯಟೆಗೆ ಅಥವಾ ನಮ್ಮವನೇ ಆದ ಕಾಳಿದಾಸನಿಗೆ ಹೋಲಿಸುವುದು ವಾಡಿಕೆಯಾದರೂ ಅವರಲ್ಲಿ ಯಾರೊಬ್ಬರೂ ಟ್ಯಾಗೋರ್‌ರ ಪ್ರಭಾವೀ ಬಹುಮುಖಿ ವ್ಯಕ್ತಿತ್ವಕ್ಕೆ ಸರಿಸಮಾನವಾದವರಲ್ಲ. ಅಲ್ಲದೆ ಟ್ಯಾಗೋರ್‌ರು ತಮ್ಮ ಕಾಲದ ಪ್ರಭಾವೀ ಚಿಂತಕರಾದ ಸ್ವಾಮಿ ವಿವೇಕಾನಂದ, ಅರವಿಂದ, ಗಾಂದಿ ನೆಹರೂ ಮುಂತಾದವರಿಗಿಂತ ಭಿನ್ನವಾಗಿ ತಮ್ಮ ನಾಡನ್ನು ಪರಿಭಾವಿಸಿದರು. ಅವರು ಕೇವಲ ಪೂರ್ವ–ಪಶ್ಚಿಮಗಳ ಸಂಘರ್ಷ–ಅನುಸಂಧಾನಗಳ ಪಾತಳಿಗಳಲ್ಲಿ ತಮ್ಮ ನುಡಿಗಟ್ಟುಗಳನ್ನು ಕಟ್ಟಲಿಲ್ಲ. ಭಾರತ ಮತ್ತು ಯೂರೋಪುಗಳಾಚೆಗಿನ ದಕ್ಷಿಣ ಅಮೆರಿಕ, ಆಫ್ರಿಕಾ ಮತ್ತು ಏಷಿಯಾದ ಇತರ ಸಂಸ್ಕೃತಿಗಳ ವಿಶಾಲ ದೃಷ್ಟಿಯಲ್ಲಿ ಪರಿಭಾವಿಸಿದರು. ಅವರೇ ತಮ್ಮೊಂದು ಕವಿತೆಯಲ್ಲಿ ಹೇಳುವಂತೆ 'ರೂಪ್ ಶಾಗೊರೆ ಘೂಬಿಯ ಜಾಚ್ಛಿ ಅರೂಪ್ ರೊತೊನ್ ಆಶಾ ಕೊರಿ' (ಅರೂಪ ರತ್ನದ ಹುಡುಕಾಟದಲ್ಲಿ ರೂಪಸಾಗರದಲ್ಲಿ ಮುಳುಗಿ ಹೋದೆ). ಮೂರು ರಾಷ್ಟ್ರಗಳಾದ ಭಾರತ ಬಾಂಗ್ಲಾದೇಶ ಮತ್ತು ಶ್ರೀಲಂಕಾಗಳಿಗೆ ಅವರು ರಾಷ್ಟ್ರಗೀತೆಗಳನ್ನು ನೀಡಿದ್ದಾರೆ. ಮೊದಲೆರಡು ರಾಷ್ಟ್ರಗೀತೆಗಳು ಅವರ ರಚನೆಗಳಾದರೆ, ಶ್ರೀಲಂಕಾದ ರಾಷ್ಟ್ರಗೀತೆಯ ಸಂಗೀತ ಟ್ಯಾಗೋರ್‌ರಿಂದ ಪ್ರೇರಿತವಾಗಿದೆ. ಟ್ಯಾಗೋರ್‌ರ ಬಹು ದೊಡ್ಡ ಸಾಧನೆಯೆಂದರೆ ಭಾರತೀಯ ಸಾಮೂಹಿಕ ಸೃಜನಶೀಲತೆ ಮತ್ತು ಚಿಂತನೆಗಳಿಗೆ ತಮ್ಮ ಮಾನಸಿಕ ಮತ್ತು ಭೌತಿಕ ವಿಶ್ವಪರ್ಯಟನದ ಮೂಲಕ ವಿಶ್ವಾತ್ಮಕತೆಯ ದೀಕ್ಷೆಯನ್ನು ನೀಡಿದ್ದು. ಕಾಳಿದಾಸ 'ಮೇಘದೂತ'ದಲ್ಲಿ ಮೊದಲ ಬಾರಿ ದಕ್ಷಿಣದ ರಾಮಗಿರಿ ಆಶ್ರಮದಿಂದ ಉತ್ತರದ ಅಲಕಾವತಿವರೆಗಿನ ವಿಶಾಲ ಸೀಮೆಯನ್ನು ತನ್ನ ಕಾವ್ಯದಲ್ಲಿ ಸಜೀವಗೊಳಿಸಿದ. ಆದರೆ ಟ್ಯಾಗೋರ್‌ರು ಅಟ್ಲಾಂಟಿಕ್‌ನಿಂದ ಪೆಸಿಫಿಕ್ ಸಾಗರ ಪರ್ಯಂತ ಉತ್ತರ ಮತ್ತು ದಕ್ಷಿಣ ಧ್ರುವಗಳ ಭೂಮಂಡಲವನ್ನೇ ತಮ್ಮ ಕಲ್ಪನೆ–ಚಿಂತನೆಗಳ ಪರಿಪೇಕ್ಷದೊಳಗೆ ತಂದುಕೊಂಡರು. ಇಷ್ಟಾದರೂ ಅವರ ಚಿಂತನೆಗಳು ಪ್ರಾದೇಶಿಕತೆಯನ್ನೂ ಬಿಟ್ಟುಕೊಡಲಿಲ್ಲ. ಬಂಗಾಳದ ಶಬ್ದ–ದೃಶ್ಯ–ಗಂಧಗಳು, ವೈಷ್ಣವ ಮತ್ತು ಬೌಲ್ ಸಂತರು, ತಮ್ಮ ಯುಗದ ಸಮಾಜಪರಿವರ್ತನಕಾರರು ಎಲ್ಲರೂ ಅವರ ಕರ್ತಾರಶಕ್ತಿಗೆ ಇಂಬು ನೀಡಿದರು.

ಅವರ ವಿಶ್ವಪ್ರೇಮಕ್ಕೆ ಇಡೀ ವಿಶ್ವ ಅವರ ಜೀವಿತಕಾಲದಲ್ಲೇ ಸ್ಪಂದಿಸಿತು. ಯೂರೋಪ್, ದಕ್ಷಿಣ ಅಮೆರಿಕ, ಚೀನಾ, ಜಪಾನ್ ಎಲ್ಲ ಕಡೆ ವಿವಿಧ ಕ್ಷೇತ್ರಗಳಲ್ಲಿ ಅವರ ಗಾಢ ಪ್ರಭಾವವಾಯಿತು.

ಮೇಲ್ಕಂಡ ವಿಚಾರಗೋಷ್ಠಿಯ ಒತ್ತು ಟ್ಯಾಗೋರ್ ಮತ್ತು ಯೂರೋಪಿನ ಸಂಬಂಧದ ಬಗ್ಗೆ ಇತ್ತು. ಯೂರೋಪಿನ ವಿವಿಧ ಸಂಸ್ಕೃತಿಗಳು ಟ್ಯಾಗೋರ್‌ರನ್ನು ಸ್ವೀಕರಿಸಿದ ಬಗೆಗಳಲ್ಲಿದ್ದ ವ್ಯತ್ಯಾಸಗಳು ಚರ್ಚೆಯಲ್ಲಿ ಸ್ಪಷ್ಟವಾದವು. ಸ್ಪೇನನ್ನು

ಬಿಟ್ಟರೆ ಇತರೆಡೆಗಳಲ್ಲಿ ಟ್ಯಾಗೋರ್‌ರ ಪ್ರಭಾವ ಸಾಹಿತ್ಯಿಕವಾಗಿರಲಿಲ್ಲ. ಜರ್ಮನಿಗೆ ಟ್ಯಾಗೋರ್‌ರು ವಿಶೇಷ ಮಹತ್ವ ನೀಡಿದ್ದರು. ಮೂರು ಬಾರಿ ಬಂದುಹೋದರು. ಇಪ್ಪತ್ತರ ದಶಕದಲ್ಲೆ ಅವರ ಚಿತ್ರಗಳ ಪ್ರದರ್ಶನ ಜರ್ಮನಿಯಲ್ಲಿ ನಡೆದು, ಆಗ ಟ್ಯಾಗೋರ್‌ರು ತಮ್ಮ ಕೆಲವು ಚಿತ್ರಗಳನ್ನು ಬರ್ಲಿನ್ನಿನ ಮ್ಯೂಸಿಯಮ್ಮಿಗೆ ಕೊಡುಗೆಗಳಾಗಿ ನೀಡಿದ್ದರು. ಆದರೆ ಹಿಟ್ಲರನ ಅಮವಾಸ್ಯೆಯಲ್ಲಿ ಅವರು ಕಲೆಯನ್ನು ಶಿಥಿಲವೆಂದು ಪರಿಗಣಿಸಲಾಗಿ ಅವನ್ನು ತೆಗೆದುಹಾಕಲಾಯಿತು. ಕಳೆದ ವರ್ಷ ಬರ್ಲಿನ್ನಿನಲ್ಲಿ ನಡೆದ ಟ್ಯಾಗೋರ್‌ರ ಚಿತ್ರಪ್ರದರ್ಶನದಲ್ಲಿ ಅವನ್ನು ಮತ್ತೆ ಪ್ರದರ್ಶನಕ್ಕಿಡಲಾಯಿತು. ಜರ್ಮನಿಯ ಪ್ರಭಾವಿಸಿತು. ಜರ್ಮನಿಯ ಎಕ್ಸ್‌ಪ್ರೆಶನಿಸ್ಟ್ ಕಲೆ ಟ್ಯಾಗೋರ್‌ರನ್ನು ಆಳವಾಗಿ ಪ್ರಭಾವಿಸಿತು. ಟ್ಯಾಗೋರ್‌ರು ಆ ಸುಮಾರಿನಲ್ಲಿ ಕಲ್ಕತ್ತೆಯಲ್ಲಿ ಎಕ್ಸ್‌ಪ್ರೆಶನಿಸ್ಟ್ ಕಲಾಪ್ರದರ್ಶನ ಏರ್ಪಡಿಸಿದ್ದರು. ಆದರೆ ಟ್ಯಾಗೋರ್‌ರು ಮೂರುಬಾರಿ ಜರ್ಮನಿಗೆ ಬಂದಾಗಲೂ ಅವರಿಗೆ ಅಭೂತಪೂರ್ವ ಸ್ವಾಗತ ಸಿಕ್ಕಿದ್ದು ಸಾಹಿತ್ಯೇತರ ವಲಯಗಳಲ್ಲಿ. ಅವರು ವಿಜ್ಞಾನಿ-ತತ್ವಜ್ಞಾನಿಗಳನ್ನು ಭೇಟಿಯಾದರೇ ಹೊರತು ಆ ಕಾಲದ ಹೆಸರಾಂತ ಬರಹಗಾರರಾದ ರಿಲ್ಕೆ, ಹೆಮ್ಮ್ ಹೆಸ್, ಥಾಮಸ್‌ಮನ್ ಇವರ್‍ಯಾರನ್ನು ಅವರು ಸಂಧಿಸಲಿಲ್ಲ. ಸಾಮಾನ್ಯ ಜನತೆ ಅವರನ್ನು ಸನಾತನ ಭಾರತದ ಆಧ್ಯಾತ್ಮಿಕ ಪರಂಪರೆಗಳ ಪ್ರತಿನಿಧಿಯಾಗಿ ಕಂಡರು. ಅವರ ತೇಜಸ್ವಿ ಕಣ್ಣುಗಳಲ್ಲಿ, ಆಳವಾದ ದನಿಯಲ್ಲಿ, ನೀಳವಾದ ಗಡ್ಡದಲ್ಲಿ ಹೊಸಯುಗದ ಪ್ರವಾದಿಯನ್ನು ಕಂಡರು ಇದೇ ರೀತಿಯ ಪ್ರಭಾವ ಸ್ವೀಡನ್ನಿನಲ್ಲಾಯಿತು. ಉಪನಿಷತ್ತುಗಳ ದರ್ಶನದಲ್ಲಿ ನುರಿತ, ಬೆಳಗ್ಗೆ ಮೂರುಗಂಟೆಗೆ ಎದ್ದು ಧ್ಯಾನ ಮಾಡುವ ಬ್ರಾಹ್ಮಣನೆಂದು ಸ್ವೀಡಿಷ್ ಪತ್ರಿಕೆಯೊಂದು ಅವರನ್ನು ಬಣ್ಣಿಸಿದಾಗ ಇನ್ನೊಂದು ಪತ್ರಿಕೆಯಲ್ಲಿ ಒಬ್ಬ ಕಾರ್ಮಿಕ ಓದುಗ 'ಇದರಲ್ಲಿ ಕೊಚ್ಚಿಕೊಳ್ಳುವುದೇನಿದೆ, ಹುಟ್ಟಾ ಕಾರ್ಮಿಕನಾದ ನನ್ನ ಅಪ್ಪನೂ ಚಿಕ್ಕಂದಿನಿಂದ ಬೆಳಗ್ಗೆ ಮೂರಕ್ಕೆ ಎದ್ದು ಕೆಲಸದಲ್ಲಿ ತೊಡಗುತ್ತಾನೆ' ಎಂದು ಗೇಲಿ ಮಾಡಿದ್ದ. ಪೋಲೆಂಡಿನಲ್ಲಿ ಟ್ಯಾಗೋರ್‌ರ 'ಗೀತಾಂಜಲಿ' ಅನುವಾದವಾಗಿತ್ತು.ಓದುಗರು ಮರುಳಾದದ್ದು ಅದರ ದಾರ್ಶನಿಕತೆಗೆ, ಕಾವ್ಯಕ್ಕಲ್ಲ. ಆದರೆ ಒಬ್ಬ ಯಹೂದಿ ಸಾಮಾಜಿಕ ಕಾರ್ಯಕರ್ತ ನಾಜಿ ಯುಗದಲ್ಲಿ ಯಹೂದಿ ಮಕ್ಕಳು ಒಂದಲ್ಲಾ ಒಂದು ದಿನ ಗ್ಯಾಸ್ ಚೇಂಬರ್‌ಗೆ ಹೋಗುವ ಅನಿವಾರ್ಯತೆಯಿದ್ದ ಕಾಲದಲ್ಲಿ ಆ ಮಕ್ಕಳಿಂದ ಟ್ಯಾಗೋರ್‌ರ 'ಪೋಸ್ಟ್ ಆಫೀಸ್' ನಾಟಕವನ್ನಾಡಿಸಿ ಅವರಿಗೆ ಸಾವನ್ನೆದುರಿಸುವ ಧೈರ್ಯನೀಡುತ್ತಿದ್ದ. ಇದನ್ನು ಹೊರತು ಮಾಡಿದರೆ ಪೋಲೆಂಡಿನಲ್ಲೂ ಟ್ಯಾಗೋರ್‌ರ ಸಾಹಿತ್ಯಕ ಪ್ರಭಾವ ಆಗಲಿಲ್ಲ. ಆದರೆ ಕೆಲವು ಪ್ರಮುಖ ಸಂಗೀತಗಾರರು ಟ್ಯಾಗೋರ್‌ರ ಕವಿತೆಗಳನ್ನು ಆಧರಿಸಿ ಸಂಗೀತ ರಚನೆಗಳನ್ನು ಮಾಡಿದರು.

ಸ್ಪೇನಿನ ಕತೆಯೇ ಬೇರೆ. ಅಲ್ಲಿನ ಪ್ರಸಿದ್ಧ ಆಧುನಿಕ ಕವಿ ಯಿಮೆನೆಜ್ ಟ್ಯಾಗೋರ್‌ರನ್ನು ಸಮರ್ಥವಾಗಿ ಅನುವಾದಿಸಿದ. ಐವತ್ತರ ದಶಕದಲ್ಲಿ ನೊಬೆಲ್ ಪ್ರಶಸ್ತಿ ಗಳಿಸಿದ ಈತ ಇಪ್ಪತ್ತರ ದಶಕಲ್ಲೇ ಸ್ಪೇನಿನ ಅತ್ಯಂತ ಪ್ರಭಾವಿ ಕವಿಯಾಗಿದ್ದ. ಮುಂದೆ ವಿಶ್ವವಿಖ್ಯಾತ ಕವಿಯಾದ ಲೋರ್ಕಾ ಈತನ ಶಿಷ್ಯ. ಗೀಂತಾಂಜಲಿಯ ಸ್ಪಾನಿಷ್ ಅನುವಾದದ ಬಿಡುಗಡೆಗೆ ಟ್ಯಾಗೋರ್‌ರನ್ನು ಆಮಂತ್ರಿಸಲಾಗಿತ್ತು. ಟ್ಯಾಗೋರ್‌ರೂ ಉಪಸ್ಥಿತರಿರಲು ಒಪ್ಪಿದ್ದರು. ಆದರೆ ಕೊನೆಯ ನಿಮಿಷದಲ್ಲಿ ಟ್ಯಾಗೋರ್‌ರು

ತಮ್ಮ ಸ್ಪೇನಿನ ಪ್ರಯಾಣವನ್ನು ರದ್ದುಗೊಳಿಸಿ ಇನ್ನೆಲ್ಲಿಗೋ ಹೊರಟುಹೋದರು. ಯಿಮೆನಜ್ ಮತ್ತವನ ಅನುಯಾಯಿಗಳಿಗೆ ಬಹಳ ನಿರಾಸೆಯಾಯಿತು. ಮುಂದೆ ಅವನು ಟ್ಯಾಗೋರ್‌ರನ್ನು ಅನುವಾದಿಸಲಿಲ್ಲ. ಆದರೆ ಅವನ ಗೀತಾಂಜಲಿಯ ಅನುವಾದ ಲೋರ್ಕಾನಂಥ ಮಹಾನ್ ಕವಿಯನ್ನು ಪ್ರಭಾವಿಸಿತು. ಮುಂದೆ ಸ್ಪ್ಯಾನಿಷ್ ಭಾಷಿಕ ದಕ್ಷಿಣ ಅಮೆರಿಕದ ದೇಶಗಳಲ್ಲಿ ಟ್ಯಾಗೋರ್‌ರ ಕಾವ್ಯಪ್ರಭಾವ ಮುಂದುವರೆಯಿತು. ಚಿಲಿಯ ಮಹಾಕವಿ ಪಾಬ್ಲೋ ನೆರೂದಾನ ಪ್ರೇಮಕಾವ್ಯದಲ್ಲಿ ವಿಮರ್ಶಕನೊಬ್ಬ ಟ್ಯಾಗೋರ್‌ರಿಂದ ಕದ್ದ ಸಾಲುಗಳನ್ನು ಗುರುತಿಸಿದನಂತೆ. ಇದರಿಂದ ಇರಿಸು ಮುರುಸಾಗಿ ಮುಂದೆಂದಿಗೂ ನೆರೂದಾ ಟ್ಯಾಗೋರ್‌ರ ಹೆಸರೆತ್ತಲಿಲ್ಲ. ಆದರೆ ಅದೇ ಖಂಡದ ಇನ್ನೊಬ್ಬ ನೊಬೆಲ್ ಪ್ರಶಸ್ತಿವಿಜೇತ ಕವಿ ಅಕ್ತೇವಿಯೋ ಪಾಜ್ ಟ್ಯಾಗೋರ್‌ರ ಬಗ್ಗೆ ಮನದುಂಬಿ ಮಾತನಾಡಿದ್ದಾನೆ.

ಇಂಗ್ಲೆಂಡಿನ ಜೊತೆಗಿನ ಟ್ಯಾಗೋರ್‌ರ ಸಂಬಂಧ ಅವರಿಗೆ ನೊಬೆಲ್ ಪ್ರಶಸ್ತಿ ದೊರಕುವಲ್ಲಿ ನೆರವಾಯಿತು. ಇದರಲ್ಲಿ ಐರಿಷ್ ಕವಿ ಯೇಟ್ಸ್‌ನ ಪಾತ್ರ ಮಿಗಿಲಾಗಿತ್ತು. ಟ್ಯಾಗೋರ್‌ರ ಇಂಗ್ಲಿಷ್ ಅನುವಾದದಲ್ಲಿ ಯೇಟ್ಸ್ ಮಹತ್ವಪೂರ್ಣ ತಿದ್ದುಪಡಿ ಮಾಡಿದ. ನೊಬೆಲ್ ಸಮಿತಿ 'ಗೀತಾಂಜಲಿ'ಯನ್ನು ಇಂಗ್ಲಿಷ್ ಕಾವ್ಯಕೃತಿಯೆಂದು ಪರಿಗಣಿಸಿತ್ತು. ಬಹುತೇಕ ಮಂದಿ 'ಗೀತಾಂಜಲಿ'ಯ ಇಂಗ್ಲಿಷ್ ಅನುವಾದವನ್ನೋದಿ ಟ್ಯಾಗೋರ್‌ರನ್ನು ಒಬ್ಬ ಕನಸುಗಾರ ರೊಮಾಂಟಿಕ್ ಕವಿಯೆಂದು ಬಗೆದಿದ್ದಾರೆ. ಅಂಥವರಿಗೆ ಟ್ಯಾಗೋರ್‌ರ ಬಹುಮುಖಿ ದೈತ್ಯ ಪ್ರತಿಭೆ ಅರ್ಥವಾಗುವುದೇ ಇಲ್ಲ. ಮುಂದೆ ಯೇಟ್ಸ್‌ನಿಗೆ ಟ್ಯಾಗೋರ್‌ರ ಕಾವ್ಯದ ಬಗ್ಗೆ ಭ್ರಮನಿರಸನವಾಯಿತು. ಟ್ಯಾಗೋರ್‌ರನ್ನು ಒಳಗೊಂಡು ಇಡೀ ಭಾರತೀಯ ಸಂಸ್ಕೃತಿಯಲ್ಲಿ ಕಾವ್ಯ ದುರಂತದ ಅಭಾವದಿಂದ ದುರ್ಬಲವಾಗಿದೆಯೆಂದು ಅವನಿಗನಿಸಿತು. ಈ ಅಭಿಪ್ರಾಯಕ್ಕೆ ಕಾರಣ ಯೇಟ್ಸ್‌ಗೆ ಟ್ಯಾಗೋರ್ ಮತ್ತು ಭಾರತೀಯ ಕಾವ್ಯದ ಬಗೆಗಿದ್ದ ಅಲ್ಪಜ್ಞಾನ. ಜೊತೆಗೆ ಟ್ಯಾಗೋರ್ ಅವರೇ ಮಾಡಿದ ಅಸಮರ್ಪಕ ಇಂಗ್ಲಿಷ್ ಅನುವಾದಗಳೂ ಮುವ್ವತ್ತರ ನಂತರದ ದಶಕಗಳಲ್ಲಿ ಅವರ ಕೃತಿಗಳ ಬಗೆಗೆ ಉದಾಸೀನವುಂಟಾಗುವುದಕ್ಕೆ ಕಾರಣ ಎಂದು ಅವರನ್ನು ಜರ್ಮನ್ ಭಾಷೆಗೆ ಸಮರ್ಪಕವಾಗಿ ಅನುವಾದಿಸಿರುವ ಬಂಗಾಳಿ ಕವಿ ಆಲೋಕರಂಜನ ದಾಸಗುಪ್ತ ಅವರ ಅಂಬೋಣ. ಈಗೇನೋ ಇಂಗ್ಲಿಷನಲ್ಲಿ ಮಿಲಿಯಂ ರ‍್ಯಾಡಿಚೆ ಮುಂತಾದವರ ಸಮರ್ಥ ಅನುವಾದಗಳು ಉಪಲಬ್ಧವಿವೆ.

೧೯೧೩ 'ಗೀತಾಂಜಲಿ'ಗೆ ನೊಬೆಲ್ ಪ್ರಶಸ್ತಿ ದೊರಕಿದ್ದರ ಶತಮಾನೋತ್ಸವ. ಟ್ಯಾಗೋರ್‌ರ ಸಾಹಿತ್ಯಿಕ-ಸಾಹಿತ್ಯೇತರ ಪ್ರಾಭಾವಗಳೂ ಇಂದು ವಿಶ್ವವ್ಯಾಪಿಯಾಗಿದ್ದರೂ ಭಾರತವನ್ನೂ ಒಳಗೊಂಡು ವಿಶ್ವದ ಹಲವು ಭಾಷೆಗಳಲ್ಲಿ 'ಗೀತಾಂಜಲಿ' ಅನುವಾದ ಇಂಗ್ಲಿಷಿನ ಮೂಲಕ ಅಗಿರುವುದರಿಂದ ಆ ಕೃತಿಯ ಶ್ರೀಮಂತಿಕೆಯ ಕಲ್ಪನೆ ಜನರಿಗೆ ಭಾಗಶಃ ಮಾತ್ರ ದೊರಕಿದೆ. ನಾರಾಯಣ ಸಂಗಮರ ಜೊತೆಗೆ ಬೇಂದ್ರೆಯವರು ಅನುವಾದಿಸಿರುವ 'ಟ್ಯಾಗೋರ್ ಕವಿತೆಗಳು' ಕನ್ನಡದ ಪುಣ್ಯ. ಆದರೆ ಇವತ್ತಿನ ಸಂದರ್ಭದಲ್ಲಿ ಟ್ಯಾಗೋರ್‌ರ ಪ್ರಾತಿನಿಧಿಕ ಕೃತಿ 'ಗೀತಾಂಜಲಿ'ಯನ್ನು ಮೂಲದಿಂದ ಜಗತ್ತಿನ ಪ್ರಮುಖ ಭಾಷೆಗಳಿಗೆ ಹೊಸ ರೀತಿಗಳಲ್ಲಿ ಅನುವಾದಿಸುವ ಜರೂರಿದೆ.

(ಸಾಭಾರ : ಪ್ರಜಾವಾಣಿ)

ಅಮೇರಿಕನ್ನರಿಗೆ ಗಾಂಧೀ ಪರಿಚಯ

– ಪಂಡಿತ್ ಜವಾಹರಲಾಲ್ ನೆಹರೂ

(ಗಾಂಧೀಜಿಯವರು ಹುತಾತ್ಮರಾದ ಅರವತ್ತನೆ ವಾರ್ಷಿಕ ದಿನಾಚರಣೆಯನ್ನು ಈ ವರ್ಷ ಜನವರಿ ೩೦ರಂದು ಜವಾಹರಲಾಲ್ ನೆಹರುವರು ಗಾಂಧೀಜಿಯವರು ಬಗ್ಗೆ ಅಮೇರಿಕಾದಲ್ಲಿ ೧೯೪೯ ರಲ್ಲಿ ಮಾಡಿದ ಎರಡು ಭಾಷಣಗಳ ಸಾರವನ್ನು ಪ್ರಕಟಿಸುತ್ತಿದ್ದೇವೆ.)

ನಿಮಗೆ ತಿಳಿದಿರುವಂತೆ ಕಳೆದ ೩೦ ವರ್ಷಗಳಿಂದ ಭಾರತದ ಸ್ವಾತಂತ್ರ್ಯ ಹೋರಾಟವನ್ನು ತೀವ್ರಗೊಳಿಸಿ ನಡೆಸುತ್ತಿದ್ದೇವೆ. ಆ ಹೋರಾಟ ಮುಂಚಿನಿಂದಲೂ ಇತ್ತು. ನಾವು ಅದನ್ನು ಮುನ್ನಡೆಸುತ್ತಿದ್ದೇವೆ. ಅದು ಜಗತ್ತಿನ ಕಣ್ಣಿಗೆ ರಾಚಿದ್ದು ಮಹಾತ್ಮಗಾಂಧಿಯವರು ಭಾರತದ ರಾಜಕೀಯ ಪ್ರವೇಶಿಸಿದ ಮೇಲೆ. ಅವರು ಭಾರತದಲ್ಲಿ ಮಹತ್ತರ ಬದಲಾವಣೆಗಳನ್ನು ತಂದರು. ನಾನು ಆವಾಗ ಚಿಕ್ಕವನಿದ್ದೆ. ಆದರೂ ಅವರು ತಂದ ಬದಲಾವಣೆಗಳನ್ನು ನಿಚ್ಚಳವಾಗಿ ನೋಡಬಲ್ಲೆ. ಯಾಕೆಂದರೆ ಅದು ನನ್ನಂತೆ ಮಿಲಿಯಾಂತರ ಭಾರತೀಯರನ್ನು ತಟ್ಟಿತ್ತು. ಭಾರತೀಯರು ಒಟ್ಟಾರೆಯಾಗಿ ದಿಕ್ಕುಕಾಣದವರಾಗಿ ವಿಹ್ವಲರಾಗಿದ್ದರು. ಅಸಹಾಯಕರಾಗಿದ್ದರು, ಅಸಂಘಟಿತರಾಗಿದ್ದರು. ಬೃಹತ್ ಬ್ರಿಟಿಷ್ ರಾಜಸತ್ತೆಯ ಮುಷ್ಟಿಯಡಿಯಲ್ಲಿ ಅನಿವಾರ್ಯವಾಗಿ ನಲುಗಿ ಸತ್ವಹೀನರಾಗಿದ್ದರು. ಶತಮಾನಗಳ ದಾಸ್ಯದಿಂದ ನಜ್ಜುಗುಜ್ಜಾಗಿದ್ದರು. ಆ ದಾಸ್ಯವನ್ನು ಕಿತ್ತೊಗೆಯುವುದು ಸಾಮಾನ್ಯ ಕೆಲಸವಲ್ಲ. ಕೆಲವು ಯುವ ಸಂಘಟನೆ ಗುಂಪುಗಳು ತಮ್ಮ ವೈಚಾರಿಕ ಗೊಂದಲಗಳ ಭಾರದಲ್ಲಿ ನಿರುಪಯುಕ್ತ ದಾರಿಯಾದ ಹಿಂಸಾಮಾರ್ಗದ ಮೊರೆ ಹೋಗಿದ್ದರು. ಇನ್ನು ಕೆಲವು ರಾಜಕೀಯ ಸಂಘಟನೆಗಳು ಸಾಕಷ್ಟು ಬೆಂಬಲವಿಲ್ಲದೆ ಬಲಹೀನವಾಗಿದ್ದವು. ಆದುದರಿಂದ ವಿಶಾಲ ಭಾರತ ಜನತೆ ಸರಿಯಾದ ಮಾರ್ಗದರ್ಶನ–ನೇತೃತ್ವದ ಕೊರತೆಯಲ್ಲಿ ನಲುಗಿತ್ತು. ಭಯೋತ್ಪಾದನಾ ಮಾರ್ಗ ಕೆಟ್ಟದಷ್ಟೇ ಅಲ್ಲದೆ ಫಲಿತಾಂಶ ಶೂನ್ಯವಾಗಿತ್ತು.

ಅವಾಗ ಗಾಂಧೀಜಿಯವರು ಆ ಶೂನ್ಯವನ್ನು ತುಂಬಿದರು. ನಮಗೆ ಒಂದು ಸದೃಢ, ಸಚ್ಚಾರಿತ್ರ್ಯ ರಾಜಕೀಯ ಹೋರಾಟವನ್ನು ಅನಾವರಣಗೊಳಿಸಿದರು. ಅವರು ತೋರಿಸಿದ ಹಾದಿ ಬೋಧಿಸಿದ ತತ್ವಗಳು ನಮ್ಮಲ್ಲೇ ಹಿಂದಿನಿಂಲೂ ಇದ್ದವು. ಹಿಂದಿನ ಋಷಿ ಮುನಿಗಳು ಹೇಳಿದ್ದನ್ನೆ ಗಾಂಧಿಜಿ ರಾಜಕೀಯ ಸಂಗ್ರಾಮಕ್ಕೆ ಅಳವಡಿಸಿದರು. ಅಗಾಧ ಜನಸಂಖ್ಯೆಯನ್ನು ಹೊಂದಿದ್ದ ಭಾರತಕ್ಕೆ ಸಂಘಟಿತ ಹೋರಾಟದ ಬದಲಾವಣೆಯನ್ನು ಅದರ ರೂಪುರೇಶೆಗಳನ್ನು ನೀಡಿದರು. ಅವಿದ್ಯಾವಂತ, ಅನಕ್ಷರಸ್ಥ ಜನಗಳೆ ಬಹುಪಾಲು ಹೊಂದಿದ್ದ ಭಾರತೀಯರು ಗುಲಾಮಗಿರಿಗೆ ಹೊಂದಿಕೊಂಡು (ದಡ್ಡರೂ ಅಲ್ಲದೆ) ಭಯಗ್ರಸ್ಥರಾಗಿದ್ದರು. ಎಲ್ಲರಿಂದಲೂ ದಬ್ಬಾಳಿಕೆಗೆ ಈಡಾಗಿದ್ದರು. ಆ ದಬ್ಬಾಳಿಕೆ ಸರ್ಕಾರದ್ದಾಗಿರಬಹುದು ಅಥವಾ ಲೇವಾದೇವಿಯವರದ್ದಾಗಿರಬಹುದು. ಈ ತರಹದ ಕ್ರೌರ್ಯದಡಿಯಲ್ಲಿ ನಲುಗುತ್ತಿದ್ದರು. ಈ ಸಂಕಟಗಳಿಂದ ಅವರಿಗೆ ವಿಮೋಚನೆ ಇರಲಿಲ್ಲ.

ಆಗ ಗಾಂಧಿಜಿ ಬಂದರು. ಅವರು ಬಿಡುಗಡೆಯ ಹೊಸ ದಾರಿಯೊಂದನ್ನು ತೋರಿದರು ಸ್ವಾತಂತ್ರದೆಡೆಗಿನ ಹೊಸ ಪಥ. ಅವರು ಹೇಳಿದರು 'ಮೊಟ್ಟಮೊದಲು ನೀವು ಭಯವನ್ನು ದೂರಮಾಡಿ, ಒಗ್ಗಟ್ಟಾಗಿ ಶಾಂತಿಯುತವಾಗಿ ಹೋರಾಟಮಾಡಿ ಜಯ ಸಿಕ್ಕೇಸಿಗುತ್ತದೆ. ನಿಮ್ಮನ್ನಾಳುತ್ತಿರುವವರ ಬಗ್ಗೆ ನಿಮ್ಮ ಹೃದಯದಲ್ಲಿ ದ್ವೇಷ ಇಟ್ಟುಕೊಳ್ಳಬೇಡಿರಿ. ನೀವು ಹೊರಾಡುತ್ತಿರುವುದು ಒಂದು ಅನ್ಯಾಯದ ಕೆಟ್ಟ ವ್ಯವಸ್ಥೆ ವಿರುದ್ಧ, ಯಾವುದೇ ವ್ಯಕ್ತಿಯ ಬಗ್ಗೆಯಲ್ಲ, ಯಾವುದೇ ರಾಷ್ಟ್ರದ ಜನತೆಯ ವಿರುದ್ಧವಲ್ಲ, ಅಥವಾ ಯಾವುದೇ ಜನಾಂಗದ ವಿರುದ್ಧವಲ್ಲವೆಂಬುದನ್ನು ಮನಗಾಣಿರಿ. ನೀವು ವಸಾಹತುಶಾಹಿ ನೀತಿಯ ವಿರುದ್ಧ ಬಂಡಾಯವೇಳಬೇಕು.

ಪವಾಡವೆಂಬಂತೆ ಅವರ ವಿಚಾರಗಳು ಮನ್ನಣೆ, ಭರವಸೆಗಳಿಸಿ ಸ್ವಲ್ಪ ತಿಂಗಳುಗಳಲ್ಲೆ ಸಂಚಲನ ಮೂಡಿಸಿತು ಜನ ಎಚ್ಚೆತ್ತರು. ದಬ್ಬಾಳಿಕೆ ನಡೆಸುತ್ತಿದ್ದವರನ್ನು ನೇರನೋಟಗಳಿಂದೆದುರಿಸಲು ಕಲಿತರು. ಅವರಲ್ಲೊಂದು ಆತ್ಮವಿಶ್ವಾಸದ ಹುರುಪು ಗೋಚರವಾಯಿತು. ಭಾರತದ ಉದ್ದಗಲ ಹರಡಿದ ಲಕ್ಷಾಂತರ ಸ್ವಾತಂತ್ರ ಹೋರಾಟಗಾರರ ಮುತುವರ್ಜಿಯಿಂದ ಇದು ಸಾಧ್ಯವಾಯಿತು. ಭಾರತದ ಮನೋಭಾವವೇ ಬಂಡಾಯಕ್ಕೆ ಹರಳುಗಟ್ಟಿತು.

'ಜನಗಳೆ ಹೆದರಿದಿರಿ' ಎಂದು ಸಾರಿದ ಗಾಂಧೀಜಿ ಆತ್ಮಾವಲೋಕನಕ್ಕೆ ಪ್ರೇರೇಪಿಸಿದರು. ಯಾತರ ಭಯ? ಜೈಲಿಗೆ ತಳ್ಳಲ್ಪಡುವ ಭಯವೇ? ಆಸ್ತಿಪಾಸ್ತಿಗಳು ಸರ್ಕಾರದ ವಶವಾಗುವ ಭಯವೇ? ಎಂದು ಜನರ ಮನಸ್ಸಿಗೆ ಸವಾಲೊಡ್ಡಿದರು. ನಿಮಗೆ ಸ್ವಾತಂತ್ರ್ಯ ಬೇಕೆ ಬೇಕಿದ್ದರೆ ಇಂತಹ ತ್ಯಾಗಕ್ಕೆ ಸಿದ್ಧರಾಗಿ ಎಂದರು, ನೀವು ಜೈಲಿಗೆ ತಳ್ಳಲ್ಪಟ್ಟರೇನು, ನಿಮ್ಮ ಆಸ್ತಿಪಾಸ್ತಿಗಳು ಪರವಶವಾದರೇನು, ನೀವು ಗುಂಡೇಟಿಗೆ ಬಲಿಯಾದರೇನು ನಿಮ್ಮ ಬಲಿದಾನ ಒಂದು ಅತ್ಯವಶ್ಯ ಮಹತ್ತರ ಆಶಯಕ್ಕೆ ಅರ್ಪಣೆಯಾಗಲಿದೆ ಆದ್ದರಿಂದ ದೊರೆಯುವ ತೃಪ್ತಿ ಸಂತೋಷ ಸೌಭಾಗ್ಯವೇ ಸರಿ ಅಂದರು.

ಈ ಮಾತುಗಳು ಜನಮಾನಸದಲ್ಲಿ ಅಜ್ಯೋತ್ತಿ ಬದಲಾವಣೆಯ ಪ್ರಕ್ರಿಯೆಗೆ ಚಾಲನೆ ನೀಡಿತು. ಹೀಗೆ ಶುರುವಾದ ರಾಜಕೀಯ ಮನ್ವಂತರವನ್ನು 'ಗಾಂಧಿಯುಗ'ವೆಂದು ಬಣ್ಣಿಸಬಹುದು. ಗಾಂಧೀಜಿಯ ದೇಹಾವಸಾನದ ನಂತರವೂ ಅದು ಒಂದಿಲ್ಲೊಂದು ರೂಪದಲ್ಲಿ ಮುಂದುವರೆಯುತ್ತದೆ. ಬೇಕಾದಷ್ಟು ಜನರು ತಮ್ಮ ನೌಕರಿ, ಸೌಕರ್ಯಗಳನ್ನು ಬಿಟ್ಟು ಬಂದು ಹಳ್ಳಿಗಳಲ್ಲಿ ಈ ಗಾಂಧಿವಿಚಾರಧಾರೆಯ ಉದ್ದೇಶಗಳನ್ನು ಪ್ರಚಾರಪಡಿಸಲು ತೊಡಗಿದರು. ನಮ್ಮ ಬದುಕು ಬದಲಾಯಿತು. ನಾವು ಮುಂಚೆ ರೂಢಿಗತ ಮಾಡಿಕೊಂಡಿದ್ದ ಜೀವನವಿಧಾನಗಳನ್ನು, ಆಸಕ್ತಿಗಳನ್ನು ಹಿಂದೆಬಿಟ್ಟು ದೇಶಕಟ್ಟುವ ಏಕೈಕ ಕೆಲಸದಲ್ಲಿ ತೊಡಗಿಸಿಕೊಂಡೆವು. ಲಕ್ಷಾಂತರ ಜನರು ಸೆರೆವಾಸ ಅನುಭವಿಸುತ್ತಿರುವಾಗ ಅದರಿಂದೇನು ಹೆಚ್ಚು ಪ್ರಯೋಜನವಾಗಲಿಲ್ಲ ಎಂದು ನೀವೆಣಿಸಿರಬಹುದು. ಆದರೆ ಆರು ತಿಂಗಳಲ್ಲೇ ಬ್ರಿಟಿಷ್ ಸರಕಾರಕ್ಕೆ ನಿಬ್ಬೆರಗಾಗುವಷ್ಟು ಬಿಸಿ ತಟ್ಟಿತು. ಬ್ರಿಟಿಷ್ ಆಡಳಿತ ಈ ಸಂಘಟಿತ ಹೋರಾಟವನ್ನು ದಮನಗೊಳಿಸುವುದು ಕಷ್ಟಕರವೆಂದು ಮನಗಂಡಿತು.

ಸರ್ಕಾರ ಹೇಗೆ ಕೆಲಸಮಾಡುತ್ತವೆ? ಪ್ರಜಾಪ್ರಭುತ್ವವಾದಿ ಸರ್ಕಾರಗಳು ಬಹುತೇಕ ಜನಗಳ ಸದಭಿಪ್ರಾಯ, ಬೆಂಬಲದೊಂದಿಗೆ ಕಾರ್ಯನಿರ್ವಹಿಸುತ್ತವೆ. ಅವರ ಸಹಕಾರದಿಂದಲೇ ಆಡಳಿತ ಯಂತ್ರ ನಡೆಯುವುದು ಜನತೆಯ ಆಶೋತ್ತರಗಳನ್ನು

ಹೆಚ್ಚು ಸಮಯ ನಿರ್ಲಕ್ಷಿಸಲಾಗದು. ಬಹುತೇಕ ಜನರ ಮುಖವಾಣಿಯಾಗಿದ್ದ ಏಕೈಕ ವ್ಯಕ್ತಿಯನ್ನು ಸರ್ಕಾರ ಬಗ್ಗು ಬಡಿಯಲು ಆಗುವುದಿಲ್ಲ. ಅಷ್ಟು ಅಗಾಧವಾದ ಬೆಂಬಲ ಆ ವ್ಯಕ್ತಿಗೆ ದೊರೆತಿರುತ್ತದೆ. ನೀವೆಲ್ಲರು ಥೊರೋನ ಬರವಣಿಗೆಗಳಲ್ಲಿ ಇದರ ಬಗ್ಗೆ ಓದಿರಬಹುದು. ಇದನ್ನು ಸಾಮುದಾಯಿಕ ಪ್ರಮಾಣದಲ್ಲಿ ಗಾಂಧೀಜಿ ಆಗಮೂಡಿಸಿದರು. ಹೋರಾಟದ ಹಾದಿಯಲ್ಲಿ ಸಣ್ಣಪುಟ್ಟ ತಪ್ಪುಗಳನ್ನು ಕಾರ್ಯಕರ್ತರು ಮಾಡಿರಬಹುದು. ಆದರೆ ಒಟ್ಟಾರೆಯಾಗಿ ಅವರ ತಂತ್ರ ಫಲಿಸಿತು. ಜಯಲಭಿಸಿತು.

(ಚಿಕಾಗೊ ವಿಶ್ವವಿದ್ಯಾಲಯದಲ್ಲಿ ೨೭ನೇ ಅಕ್ಟೋಬರ್ ೧೯೪೯ರಲ್ಲಿ ಮಾಡಿದ ಭಾಷಣ)

ಎರಡನೆ ಭಾಷಣ

ಭಾರತ ಸಹಸ್ರಾರು ವರ್ಷಗಳ ಇತಿಹಾಸವಿರುವ ಪುರಾತನ ದೇಶ. ಇಂದು ಯುವ ಜಾಗೃತ ರಾಷ್ಟ್ರವಾಗಿ ಜಗತ್ತಿನೆದುರು ನಿಂತಿದೆ. ವಿಮೋಚನೆಗಾಗಿ ಮೂರು ದಶಕಕ್ಕೂ ಮಿಕ್ಕಿ ಸಂಗ್ರಾಮದಲ್ಲೇ ಮುಳುಗಿತ್ತು. ಮಹಾತ್ಮಗಾಂಧಿಯವರ ನೇತೃತ್ವದಲ್ಲಿ ಅನನ್ಯ ಹೋರಾಟದಿಂದ ಸ್ವಾತಂತ್ರ್ಯ ದಕ್ಕಿಸಿಕೊಂಡಿತು. ಅವರೊಬ್ಬರು ಬಹು ಅಪರೂಪದ ವ್ಯಕ್ತಿ, ರಾಷ್ಟ್ರಪಿತನೆಂದು ಕರೆಯಿಸಿಕೊಳ್ಳುತ್ತಿರುವ ಅವರು ಒಬ್ಬ ಮಹಾನ್ ಪುರುಷ. ಅವರ ಹಿರಿಮೆಯನ್ನು ನಮ್ಮ ತಲೆಮಾರಿನವರು ಯಥೇಚ್ಚವಾಗಿ ಅನುಭವಿಸಿದ್ದಾರೆ. ನಾವು ಇಂದು ಜಗತ್ತನ್ನು ನೋಡುತ್ತಿರುವುದು ಮತ್ತು ನಮ್ಮ ವಿದೇಶಾಂಗ ನೀತಿ ರೂಪಿಸಿಕೊಳ್ಳುತ್ತಿರುವುದು ಆ ಮಹಾತ್ಮನ ಚಿಂತನೆಗಳ ರೂಪುರೇಶೆಗಳಡಿಯಲ್ಲೇ. ಅದು ಶಾಂತಿ ಮತ್ತು ಅಹಿಂಸೆಯ, ಸಹಕಾರದ ಆಧಾರದ ಮೇಲೆ ಕಟ್ಟಲ್ಪಟ್ಟಿದೆ. ಸಂಕಟ ಮತ್ತು ಕೊರತೆರಹಿತ ಜಗತ್ತಿನ ನಿರ್ಮಾಣದ ಕನಸು ನಮ್ಮ ಮುಂದಿದೆ. ಮಹಾತ್ಮಗಾಂಧಿ ನಮ್ಮ ಸ್ವಾತಂತ್ರ್ಯ ಸಂಗ್ರಾಮವನ್ನು ಶೋಷಿತರ, ನಿರ್ಗತಿಕರ, ಅಲ್ಪಸಂಖ್ಯಾತರ ಹೋರಾಟವನ್ನಾಗಿ ಭಾವಿಸಬೇಕೆಂದು ತಿಳಿಸಿದ್ದರು.

ಹಾಗಾಗಿ ಈ ರಾಜಕೀಯ ಸಂಗ್ರಾಮಕ್ಕೆ ಆರ್ಥಿಕ ಸಮಾನತೆಯ ಆಶಯಗಳೂ ತಳುಕು ಹಾಕಿಕೊಂಡಿವೆ.

ಯಾವಾಗಲೂ ನಿರಂತರವಾಗಿ ಸುಖ, ಭೋಗಗಳನ್ನು ಬಯಸುತ್ತಿರುವವರಿಗೆ ನಿಜವಾದ ಸ್ವಾತಂತ್ರ್ಯ ದಕ್ಕಲಾರದೆಂದು ನಾವು ಮನಗಂಡಿದ್ದೇವೆ. ಬದುಕಿನ ಮೂಲಭೂತ ಅವಶ್ಯಕತೆಗಳಿಂದಲೂ ವಂಚಿತರಾಗಿರುವ ಕೋಟಿಗಟ್ಟಲೆ ಭಾರತೀಯರಿದ್ದಾರೆ. ಭಾರತದ ಸ್ವಾತಂತ್ರ್ಯವೆಂದರೆ ಈ ಬಡಜನರ ಉದ್ಧಾರ ಎಂದು ನಾವು ಅಂದುಕೊಂಡಿದ್ದೇವೆ. ಈಗ ನಾವು ರಾಜಕೀಯ ಸ್ವಾತಂತ್ರ್ಯವನ್ನು ಪಡೆದಿದ್ದೇವೆ. ಇನ್ನು ಮುಂದಿನ ನಮ್ಮ ಗುರಿ ಈ ಬಡಜನತೆಯ ಕಷ್ಟಗಳನ್ನು ಪರಿಹರಿಸುವುದರಲ್ಲಿದೆ. ಗಾಂಧಿ ಒಮ್ಮೆ ಹೇಳಿದ್ದರು 'ಎಲ್ಲರ ಕಣ್ಣಿನ ಕಂಬನಿಯನ್ನೊರೆಸುವುದೇ ನನ್ನ ಜೀವನದ ಪರಮೋದ್ದೇಶ ಎಂದು'. ವಾಸ್ತವವಾಗಿ ಅಕ್ಷರಷಹ ಅದನ್ನು ಸಾಕಾರಗೊಳಿಸಲಾಗದಿದ್ದರೂ ಇಂಡಿಯಾ ಮತ್ತು ಏಶಿಯರಾಷ್ಟ್ರಗಳಲ್ಲಿ ಪ್ರಯತ್ನ ನಡೆದಿದೆ. ಬಹುಶಃ ಜಗತ್ತಿನ ಎಲ್ಲರ ಕಣ್ಣೀರನ್ನೊರೆಸುವುದು ಅಸಾಧ್ಯವಾದರೂ ಅವರ ದುಃಖ ಸಂಕಟಗಳನ್ನು ಕಡಿಮೆ ಮಾಡುವಷ್ಟಾದರೂ ಯಶ ಸಿಗಲಿ. ಈ ದೃಷ್ಟಿಕೋನವಿಲ್ಲದ ರಾಜಕೀಯ ಸಿದ್ಧಾಂತಗಳ ವಿಶ್ಲೇಷಣೆ ಚರ್ಚೆ ವಾಗ್ದಾನ ಯಾತಕ್ಕಾಗಿ?

(ಅನು : ಡಾ॥ ವಿಜಯಶಂಕರ್)

ಉಪನಿಷತ್ತುಗಳ ಅಧ್ಯಯನ – ಓಂ

– *ವಿನೋಬಾ*

ಕೇನೋಪನಿಷತ್‌ನಲ್ಲಿ 'ಓಂ'ಕಾರದ ಬಗ್ಗೆ ಇರುವ ಗೌರವವನ್ನು ಸೂಚಿಸುವ ಒಂದು ಆಖ್ಯಾಯಿಕೆ ಇದೆ.

ಒಂದು ಸಲ ದೇವಾಸುರ ಸಂಗ್ರಾಮದಲ್ಲಿ ಬ್ರಹ್ಮ ದೇವತೆಗಳಿಗೆ ಜಯ ಪ್ರಾಪ್ತಮಾಡಿದ. ಆಗ ದೇವತೆಗಳು ಗರ್ವದಿಂದ ಉಬ್ಬಿ ಹೇಳತೊಡಗಿದರು, "ಇದು ನಮ್ಮದೇ ವಿಜಯ, ಇದು ನಮ್ಮದೇ ಮಹಿಮೆ" ಅವರ ಜಂಭದ ಈ ಮಾತು ಬ್ರಹ್ಮನ ಕಿವಿವರೆಗೆ ತಲುಪಿತು. ಆಗ ಬ್ರಹ್ಮ ಒಂದು ಅದ್ಭುತ ಯಕ್ಷನ ರೂಪ ಧರಿಸಿ ದೇವತೆಗಳ ಎದುರಿನಲ್ಲಿ ಪ್ರಕಟವಾದ. 'ಇವನ್ಯಾರು' ಎಂದು ಆ ದೇವತೆಗಳು ವಿಚಾರ ಮಾಡಲಾರಂಭಿಸಿದರು. ಆದರೆ ಏನೊ ಗೊತ್ತಾಗಲಿಲ್ಲ. ಕೊನೆಗೆ ಅವರು ಅಗ್ನಿಯನ್ನು ಕೇಳಲಾರಂಭಿಸಿದರು.

"ಹೇ ಸರ್ವಜ್ಞ, ಅಗ್ನಿದೇವಾ ಇದು ಯಾವ ಭೂತ" (ಯಕ್ಷ)

ಅಗ್ನಿ ಆ ಯಕ್ಷನ ಎದುರಿನಲ್ಲಿ ಉಪಸ್ಥಿತನಾದ.

"ನೀನು ಯಾರು?"

"ನಾನು ವಿಶ್ವ ವಿಖ್ಯಾತ ಅಗ್ನಿ"

"ನಿನ್ನಲ್ಲಿ ಯಾವ ಶಕ್ತಿ (ವೀರ್ಯ) ಇದೆ?"

"ನಾನು ಪೃಥ್ವೀ ಮೇಲಿನ ಪ್ರತಿಯೊಂದು ವಸ್ತುವನ್ನು ಸುಡಬಲ್ಲೆ"

"ಹಾಗಾದರೆ ಈ ಹುಲ್ಲು ಕಡ್ಡಿಯನ್ನು ಸುಡು" ಎಂದು ಹೇಳಿ ಬ್ರಹ್ಮ ಒಂದು ಹುಲ್ಲು ಕಡ್ಡಿಯನ್ನು ಅವನ ಎದುರಿಗೆ ಇಟ್ಟ, ಆದರೆ ಅಗ್ನಿ ತನ್ನೆಲ್ಲ ಶಕ್ತಿಯನ್ನು ಉಪಯೋಗಿಸಿದ ಮೇಲೂ ಆ ಹುಲ್ಲುಕಡ್ಡಿಯನ್ನು ಸುಡಲಾರದೇ ಹೋದ ಮತ್ತು ಸಣ್ಣಮುಖ ಮಾಡಿಕೊಂಡು ದೇವತೆಗಳ ಬಳಿ ಹಿಂದಿರುಗಿದ. ತದನಂತರ ವಾಯುವಿನ ಸರದಿ. ಅವನದು ಇದೇ ಸ್ಥಿತಿ.

"ಯಾರು ನೀನು?"

"ನಾನು ತಾಯಿಯ ಮಗ (ಮಾತರೀ ಶ್ವಾ) ವಾಯು"

"ನಿನ್ನಲ್ಲಿ ಯಾವ ಶಕ್ತಿ ಇದೆ?"

"ನಾನು ಪೃಥ್ವೀ ಮೇಲಿನ ಪ್ರತಿಯೊಂದನ್ನು ಹಾರಿಸಬಲ್ಲೆ"

"ಹಾಗಾದರೆ ಹಾರಿಸು ಈ ಕಡ್ಡಿಯನ್ನು" ಎಂದು ಹೇಳಿ ಬ್ರಹ್ಮ ಅದೇ ಕಡ್ಡಿಯನ್ನು ವಾಯುವಿನ ಎದುರಿಗೆ ಇಟ್ಟ, ಆದರೆ ಅವನ ಸ್ಥಿತಿ ಕೊಡ ಅಗ್ನಿಯಂತೆಯೇ ಆಯಿತು. ಕೊನೆಗೆ ದೇವತೆಗಳು ಸಕಲ–ಸಮೃದ್ಧ (ಮೇಘವನ್) ಇಂದ್ರನಿಗೆ ಪ್ರಾರ್ಥನೆ ಮಾಡಿದರು. ಇಷ್ಟರಲ್ಲಿ ಯಕ್ಷ ರೂಪಿ ಬ್ರಹ್ಮ ಅಲ್ಲಿಯೇ ಅಂತರ್ಧಾನನಾದ. ನಂತರ ಅದೇ ಆಕಾಶದಲ್ಲಿ ಪ್ರಖರವಾಗಿ ಹೊಳೆಯುವ ಹಿಮವಾನನ ಪುತ್ರಿ ದೇವಿ ಉಮಾ ಕಂಡು ಬಂದಳು. ಇಂದ್ರನು ಅವನಿಗೆ ಯಕ್ಷನ ಬಗ್ಗೆ ಪ್ರಶ್ನೆ ಕೇಳಿದ. ಅವಳು

ಹೇಳಿದಳು. "ಯಾರ ಉಮಾದೇವಿಯಿ ಈ ಶಬ್ದ ಹೇಳುತ್ತಲೇ ಅವನ ಬುದ್ಧಿಯಲ್ಲಿ ಪ್ರಕಾಶದ ಉದಯವಾಯಿತು".

ಇಂದ್ರನ ಹೃದಯಕಾಶದಲ್ಲಿ ಪ್ರಕಟವಾದಳು ಮತ್ತು ಅವನಿಗೆ ಬ್ರಹ್ಮೋಪದೇಶ ಕೊಡುವ ಹಿಮಾಲಯದ ಕನ್ಯೆ. ಶಕ್ತಿ-ಪಥದ ಆದಿ ಮಾತೆ ಈ ಉಮಾ ಯಾರು? ಪ್ರಖರವಾಗಿ ಹೊಳೆಯುತ್ತಿರುವ ಈ ಉಮಾನನ್ನು ಭಾಷ್ಯಕಾರರು ವಿದ್ಯಾದೇವಿ ಎಂದಿದ್ದಾರೆ. ಇಂದ್ರ ಮತ್ತು ಯಕ್ಷ ಅಥವಾ ಜೀವ ಮತ್ತು ಶಿವನ ಈ ಬ್ರಹ್ಮವಿದ್ಯೆಯನ್ನು 'ಉಮಾ' ಎಂದೆನ್ನುವಲ್ಲಿ ಯಾವ ದೊಡ್ಡ ವಿಶೇಷತೆ ಇದೆ? ಉಪನಿಷತ್‌ಗಳಲ್ಲಿ ಒಂದು ಸ್ಥಳದಲ್ಲಿ ಹೀಗೆ ಹೇಳಲಾಗಿದೆ. ಬ್ರಹ್ಮ-ವಿದ್ಯಾದ ಧನುಷ ಮೇಲೆ ಆತ್ಮದ ಬಾಣವನ್ನು ಇಟ್ಟಮೇಲೆಯೇ ತಿಳಿಯಬೇಕು. ಆದರೆ ಉಪನಿಷತ್ತುಗಳ ಪದ್ಧತಿಯನುಸಾರ ರೂಪಕದ ಈ ಗೂಢಾರ್ಥವನ್ನು ಪ್ರಕಟ ಪಡಿಸುವುದಕ್ಕಾಗಿ ಈ ಶಬ್ದದಲ್ಲಿ ಕೂಡ ಒಂದಿಲ್ಲ ಒಂದು ಬೀಗದ ಕೈಯನ್ನು ಅವಶ್ಯವಾಗಿ ಇಟ್ಟಿರಬಹುದಾಗಿದೆ. ಅದು ಯಾವುದು. 'ಓಂ' ಕಾರ ಯಾವ ರೀತಿ ರಚಿತವಾಗಿದೆ ಅದರ ಬಗ್ಗೆ ಗಮನ ಕೊಟ್ಟಲ್ಲಿ ಅದು ಗೊತ್ತಾಗುವುದು. 'ಓಂ' ಅ,ಉ,ಮ್, ಈ ಮೂರು ಅಕ್ಷರಗಳು ಸಮವಾಯದಿಂದ ರಚಿತವಾಗಿದೆ. ಇವೇ ಅಕ್ಷರಗಳನ್ನು ಒಂದು ವೇಳೆ ಬೇರೆ ಕ್ರಮದಿಂದ ತೆಗೆದುಕೊಂಡು ಸ್ತ್ರೀಲಿಂಗ ಶಬ್ದ ಮಾಡಿದರೆ 'ಉಮಾ' ಶಬ್ದವಾಗುತ್ತದೆ. ಈ ಪ್ರಕಾರ 'ಉಮಾ' ಶಬ್ದದಿಂದ ಓಂಕಾರ ಹಾಗೂ ಪರ್ಯಾಯದಿಂದ ಬ್ರಹ್ಮ ಮತ್ತು ವಿದ್ಯೆಯ ಸೂಚನೆಯಾಗುತ್ತದೆ. ಓಂಕಾರದ ಚಿಂತನೆ ನಮ್ಮ ಬ್ರಹ್ಮ-ವಿದ್ಯಾಮಂದಿರದ ಗರ್ಭಗ್ರಹ. ಓಂಕಾರಕ್ಕಾಗಿಯೇ ಎರಡನೇಯ ಶಬ್ದ 'ಪ್ರಣವ'. 'ಪ್ರಣವ' ಶಬ್ದ 'ಸ್ತುತಿ' ಮಾಡುವುದು-ಧಾತುವನ್ನು 'ಪ್ರ' ಉಪಸರ್ಗಬಿಟ್ಟು ರಚಿತವಾಗಿದೆ. ಆದ್ದರಿಂದ ಅದರ ಅಕ್ಷರಶ: ಅರ್ಥ ಉತ್ತಮ ಸ್ತುತಿ. ಈ ಉತ್ತಮ ಸ್ತೋತ್ರದ 'ಪ್ರಣವ'ದ ಅಥವಾ ಓಂಕಾರದ ಆಂತರಿಕ ಚಿಂತನೆ ಹಾಗೂ ಬಾಹ್ಯ ಜಪ ಇವೆರಡೂ ಬ್ರಹ್ಮ-ವಿದ್ಯೆಯ ಆಂತರ್ಯ ಮತ್ತು ಬಾಹ್ಯ ಎರಡು ಅಂಗಗಳು. ಆದ್ದರಿಂದ ಉಮಾನ ವಚನ ಕೇಳಿದ ನಂತರವೆ ಇಂದ್ರನ ಬುದ್ಧಿಯಲ್ಲಿ ಪ್ರಕಾಶದ ಉದಯವಾಯಿತು. ಈ ವಾಕ್ಯದ ಮರ್ಮವನ್ನು ಈಗ ತಿಳಿಯಬಹುದಾಗಿದೆ.

ಆತ್ಮಾನಂ ಮರಣೀಂ ಕೃತ್ವಾ ಪ್ರಣವಂ ಚೋತ್ತರರಾಣೀಮ್ - ಆತ್ಮಾರೂಪಿ ಕೆಳಗಿನ ಕಟ್ಟಿಗೆ ಮತ್ತು ಮೇಲೆ ಪ್ರಣವ ಅಥವಾ ಓಂಕಾರ ರೂಪಿ. ಈ ಎರಡರ ಘರ್ಷಣೆಯಿಂದ ಜ್ಞಾನಾಗ್ನಿಯನ್ನು ಉತ್ಪಾದಿಸುವುದಾಗಲಿ. ಈ ವಾಕ್ಯದಲ್ಲಿ ಅಥವಾ ***ಪ್ರಣವಾ ಧನು: ಶರೋ ಹ್ಯಾತ್ಮಾ ಬ್ರಹ್ಮ ತಲ್ಲಕ್ಷಮಚ್ಯತೇ*** - ಓಂಕಾರ ಧನುಷ, ಆತ್ಮ ಬಾಣ ಮತ್ತು ಬ್ರಹ್ಮನನ್ನು ಗುರಿಯೆಂದು ತಿಳಿಯಬೇಕು. ಈ ವಾಕ್ಯದಲ್ಲಿ ಕೂಡ ಓಂಕಾರ ರೂಪಿಣಿ ಉಮಾನದೆ ಮಧ್ಯಸ್ಥತೇ ಸೂಚಿತವಾಗಿದೆ.

ಓಂಕಾರದ ವರ್ಣನೆ ಮಾಡುವ ಮತ್ತು ಒಂದು ಆಖ್ಯಾಯಿಕೆ ಛಾಂದಗ್ಯೋಪನಿಷತ್ತಿನಲ್ಲಿ ಬಂದಿದೆ. "ಬೆನ್ನತ್ತಿ ಬರುವ ಮೃತ್ಯುವಿಗೆ ಹೆದರಿ ದೇವತೆಗಳು ತ್ರಯೀ ವಿದ್ಯಾ ಅಂದರೆ ವೇದಗಳ ಮುಸುಕಿನ ಶರಣ ಪಡೆದರು. ಈ ಪ್ರಕಾರದ ವೇದಗಳು ಸಂಸಾರತ್ರಸ್ಥ ಮನುಷ್ಯನಿಗೆ ಅವಿತುಕೊಳ್ಳವ ಸ್ಥಳಾವಾಗಿರುವುದರಿಂದ ಅವುಗಳನ್ನು ಛಂದಸ್ ಎನ್ನುತ್ತಾರೆ. ಆದರೆ ಯಾವ ರೀತಿ ಮೊಸಳೆ ನೀರಿನಲ್ಲಿ ಮೀನನ್ನು ಹುಡುಕಿ ತೆಗೆಯುತ್ತದೋ ಅದೇ ರೀತಿ ಈ ಗುಪ್ತ ಜಗದಲ್ಲಿ ಕೂಡ ಯಾವಾಗ ಮೃತ್ಯು ದೇವತೆಗಳನ್ನು ಹಿಡಿಯಿತೊ ಆಗ ಈ ಕೋಟೆಯನ್ನು ಬಿಟ್ಟು

ಅವರು ಓಂಕಾರದ ದುರ್ಜಯ ಕೋಟೆಯ ಆಶ್ರಯ ಪಡಯಬೇಕಾಯಿತು. ಈ ಕೋಟೆಯ ಮೇಲೆ ಮೃತ್ಯುವಿನ ಯಾವ ಬಲವೂ ನಡೆಯುತ್ತಿರಲಿಲ್ಲ. ಆದುದರಿಂದ ಅಲ್ಲಿಗೆ ಹೊದದ್ದರಿಂದ ದೇವತೆಗಳು ಮೃತ್ಯುವಿನ ತ್ರಾಸದಿಂದ ಮುಕ್ತರಾಗಿ ನಿರ್ಭಯರಾದರು. "ಯಾರು ಈ ಓಂಕಾರದ ಉಪಾಸನೆ ಮಾಡುವರೋ ಅವರು ಕೂಡ ದೇವತೆಗಳಂತೆಯೇ ಅಮೃತ ಮತ್ತು ಅಭಯರಾಗುವರು."

ಈ ಆಖ್ಯಾಯಿಕೆಯಲ್ಲಿ ಯಾವ ನಿರ್ಭಯತೆ ವೇದಗಳಲ್ಲಿ ಕೂಡ ಇಲ್ಲವೊ ಅದು ಓಂಕಾರದಲ್ಲಿದೆ ಎಂದು ಹೇಳಿ ಒಂದು ರೀತಿಯಲ್ಲಿ ಓಂಕಾರದೊಂದಿಗಿನ ಹೋಲಿಕೆಯಲ್ಲಿ ವೇದಗಳದು ಕೂಡ ಅಧಿಕ್ಷೇಪ ಮಾಡಿದಂತೆ ತಿಳಿಯುತ್ತದೆ. ಮಂಡಕ್ಕೋಪನಿಷತ್ತಿನಲ್ಲಿ ಕೂಡ ವಿದ್ಯೆಯು ಶ್ರೇಷ್ಠ ಮತ್ತು ಕನಿಷ್ಠ ಎಂದೆಂಬ ಎರಡು ರೀತಿ ಮಾಡಿ ಋಗ್ವೇದಾದಿ ನಾಲ್ಕು ವೇದ ಹಾಗೂ ವ್ಯಾಕರಣಾದಿ ಆರು ವೇದ್ಧಾಂಗಗಳ ಸಮಾವೇಷ ಕನಿಷ್ಟ ಅಪರ ವಿದ್ಯೆಯಲ್ಲಿ ಮಾಡಿದೆ. ಮತ್ತು ಯಾವುದರ ಯೋಗದಿಂದ ಆ ಒಂದು ಅಕ್ಷರ ದೊರೆಯುತ್ತದೋ ಅದನ್ನು ಪರಾವಿದ್ಯೆ ಎಂದು ಹೇಳಲಾಗಿದೆ. ಏಕೆಂದರೆ ಅ-ಕ್ಷರ ಶಬ್ದದ ಅರ್ಥ ಉತ್ಪತ್ತಿಯ ದೃಷ್ಟಿಯಿಂದ ಅವಿನಾಶಿ ಎಂದಾಗುತ್ತದೆ. ಆದ್ದರಿಂದ ಆ ಶಬ್ದ ಪರಮ ಬ್ರಹ್ಮದ ಪ್ರತೀಕವಾದ ಚಿನ್ನ ಆಗಬಹುದು. ಗೀತೆಯ 'ಓಂ ಇತ್ಯಕ್ಷರಂ ಬ್ರಹ್ಮ' ವಚನದ ಅರ್ಥ ಇದೆ ಆಗಿದೆ ಮತ್ತು ಈ ಅಕ್ಷರ ಪ್ರಸ್ವದೀರ್ಘವೂ ಇಲ್ಲ ಹೀಗೆ ಅಲಂಕಾರಿಕ ವರ್ಣನೆ ದೊರೆಯುತ್ತದೆ ಯಾರಿಗೆ ಅಕ್ಷರವೇ ಗೊತ್ತಿಲ್ಲವೊ ಅವರು ವೇದಾದಿಗಳನ್ನು ಬಾಯಿಪಾಠಮಾಡಿರಲಿ ಅಥವಾ ಪ್ರಗಾಢ ವೈಯ್ಯಾಕರಣಿ ಮತ್ತು ತಾರ್ಕಿಕನಾಗಿದ್ದರೂ ಕೂಡ ಉಪನಿಷತ್ತುಗಳ ಪ್ರಕಾರ ಅವರನ್ನು ನಿರಕ್ಷರ ಇಲ್ಲವೇ ಅಕ್ಷರ ಶತ್ರುನೆಂದೇ ತಿಳಿಯಬೇಕು. ಗೀತೆಯಲ್ಲೂ ಕೂಡ ತ್ರಯೀ ವಿದ್ಯೆಯ ಅಂದರೆ ವೇದಗಳ ಹಿಂದೆ ಬಿದ್ದಿರುವ ಜನರು ಹೆಚ್ಚೆಂದರೆ ಸ್ವರ್ಗಕ್ಕೆ ಹೋಗಬಹುದು, ಆದರೆ ಮೋಕ್ಷವಂತೂ ಪಡೆಯಲಾರರು. ಆತ್ಮಜ್ಞಾನದ ಗಂಗೆಯಲ್ಲಿ ಈಜುವ ಜನರಿಗೆ ವೇದಗಳ ಬೆಲೆ ಹೋಲಿಕೆಯಲ್ಲಿ ಒಂದು ನೀರು ತುಂಬಿದ ಕೊಡಕ್ಕೆ ಸಮಾನವಾಗಿದೆ ಅಥವಾ ವೇದಗಳಲ್ಲಿ ಮೂರು ಗುಣಗಳ ಬೆರಕೆಯಿದೆ ಆದ್ದರಿಂದ ನೀನು ಅದರಲ್ಲಿ ಸಿಕ್ಕಿಬೀಳಬೇಡ ಇತ್ಯಾದಿ ವೇದಗಳ ಹೀನತೆ ಹೇಳುವ ವಚನಗಳು ಬಂದಿವೆ. ವಿಶ್ವಾಸ ಮತ್ತು ಗೌರವದ ದೃಷ್ಟಿಯಿಂದ ಸಂತರ ವಚನಗಳನ್ನು ವಿಚಾರ ಮಾಡುವವರಿಗೆ ಇದರ ಅರ್ಥ ತಿಳಿಯುತ್ತದೆ. ಆದರೂ ಕೂಡ ಯಾವ ವಿದ್ವಾಂಸರಿಗೆ ಆರ್ಯ ಸಂಸ್ಕೃತಿಯೊಂದಿಗೆ ಪರಿಚಯ ಇಲ್ಲವೊ ಹಾಗೂ ಯಾರು ಮುಖ್ಯವಾಗಿ ಐತಿಹಾಸಿಕ ಅಥವಾ ಆಲೋಚನಾತ್ಮಕ ದೃಷ್ಟಿಯಿಂದಲೇ ವೇದಾದಿಗಳನ್ನು ಪರೀಕ್ಷಣೆ ಮಾಡುತ್ತಾರೊ ಅಂಥ ಜನರಿಗೆ ಇದರ ಅರ್ಥವನ್ನು ತಿಳಿಸುವುದು ಕಠಿಣವಾಗಿದೆ. ಅವರ ಅಭಿಪ್ರಾಯಕ್ಕನುಸಾರ ಯಾವ ಕಾಲದಲ್ಲಿ ವೇದಗಳ ಬಗ್ಗೆ ಪೂಜ್ಯ ಬುದ್ಧಿ ಕಡಿಮೆಯಾಗಲಾರಂಭಿಸಿತೊ ಆ ಕಾಲದಲ್ಲಿಯೇ ಉಪನಿಷತ್ತುಗಳ ರಚನೆಯಾಯಿತು. ಆದ್ದರಿಂದ ಉಪನಿಷತ್ತುಗಳ ಅಥವಾ ಅವುಗಳ ನಂತರದ ಗೀತೆಯಂಥ ವೇದಾಂತ ಗ್ರಂಥಗಳ ತತ್ವಜ್ಞಾನದಲ್ಲಿ ವೇದಗಳ ವಿರುದ್ಧ ಒಂದು ಬಂಡಾಯವಿದೆ ಮತ್ತು ಬಂಡಾಯಕಾರರೊಳಗಿಂದ ಕೆಲವು ಅತಿವಾದಿ ಅಥವಾ ಉಗ್ರಜನರು ಮುಂದೆ ಹೋಗಿ ವೇದ ಮತ್ತು ಬ್ರಹ್ಮ ಎಂದು ತಿಳಿಯಲ್ಪಡುವ ಬೌದ್ಧ ಮತ್ತು ಜೈನ ಧರ್ಮಗಳನ್ನು ಸ್ಥಾಪನೆ ಮಾಡಿದರು. ಎಲ್ಲಿಯವರೆಗೆ ಪರೀಕ್ಷಣೆಯ ಉದ್ಧಟತನದ ವೃತ್ತಿ ಇರುವುದೊ

ಅಲ್ಲಿಯವರಗೆ ಧರ್ಮಗ್ರಂಥಗಳಿಂದ ಈ ಪ್ರಕಾರದ ಮಾತುಗಳನ್ನು ಹುಟ್ಟಿಸುವುದು ಅಪರ್ಯಾಯ.

ಕರಿಮಸ್ತಕ ರೇಂಗಣ ಲಾಗೆ ಸತಾನಚರಣ (ತಲೆ ಬಾಗಿಸಿ ಸಂತರ ಚರಣಗಳಿಗೆ ಬೀಳಬೇಕು)

ಈ ನಮ್ರವೃತ್ತಿಯಿಂದಲೇ ಋಷಿ ವಚನಗಳ ಅಧ್ಯಯನ ಮಾಡಬೇಕು ಒಂದು ವೇಳೆ ನೀವು ಋಷಿಗಳಿಗಿಂತಲೂ ದೊಡ್ಡವರಾಗಿದ್ದಾರೆ ನೀವು ಋಷಿಗಳ ಗ್ರಂಥಗಳ ಅಧ್ಯಯನ ಮಾಡುವ ಅವಶ್ಯಕತೆಯೆ ಇಲ್ಲ. ನಿಮಗೆ ಋಷಿಗಳ ಗ್ರಂಥಗಳಿಂದ ಯಾವುದೆ ಜೀವನೋಪಯೋಗಿ ದಾರಿ ಸಿಗುವುದು ಎಂಬ ವಿಶ್ವಾಸ ಇದ್ದರೆ ಮಾತ್ರ ಅವುಗಳಿಂದ ಯಾವುದಾದರು ಪ್ರಯೋಜನವಾಗುವುದು. ಅದು ಇಲ್ಲವಾದರೆ ಶುಷ್ಕ ಐತಿಹಾಸಿಕ-ಕಲ್ಪನೆಗಳಲ್ಲದೆ ಇನ್ನೇನು ನಿಷ್ಫಲವಾಗುವುದಿಲ್ಲ. ಉಪನಿಷತ್ತುಗಳ ತತ್ವಜ್ಞಾನ ವೈದಿಕ ಕಲ್ಪನೆಗಳ ವಿರುದ್ಧ ಬಂಡಾಯ ಮಾಡಿದೆ. ಈ ವಿಚಾರದ ಮೂಲದಲ್ಲಿ ವೇದಗಳ ದೋಷವನ್ನು ತೋರಿಸುವ ಎರಡು ಮೂರು ವಾಕ್ಯಗಳು ಕೂಡಾ ಇಲ್ಲ. ಆದರೆ ವೇದಗಳಲ್ಲಿ ಕರ್ಮಕಾಂಡದ ಹೊರತಾಗಿ ಇನ್ನೇನು ಇಲ್ಲ. ಇಂತಹ ಸ್ಥಿತಿಯಲ್ಲಿ ಎಲ್ಲಿಯವರೆಗೆ ನಾವು ಈ ಅಭಿಪ್ರಾಯದ ವಿಚಾರವನ್ನೆ ಮಾಡುವುದಿಲ್ಲವೊ ಅಲ್ಲಿಯ ವರೆಗೆ ಮೇಲೆ ಹೇಳಿದ ಅಭಿಪ್ರಾಯದ ನಿರಶನವಾಗುವುದಿಲ್ಲ.

ಈ ಅಭಿಪ್ರಾಯ ಮುಖ್ಯವಾಗಿ ಪಾಶ್ಚಾತ್ಯ ಸಂಶೋಧಕರಲ್ಲಿದೆ. ಮತ್ತು ನಾವು ಅದನ್ನೆ ನಮ್ಮಲ್ಲಿ ಅನೇಕ ವಿದ್ವಾಂಸರು ಎತ್ತಿಕೊಂಡಿದ್ದಾರೆ ಈ ಐತಿಹಾಸಿಕ ಅಭಿಪ್ರಾಯದ ಹೊರತಾಗಿ ಎರಡು ಪ್ರತ್ಯೇಕವಾದ ಕಾರಣ ಈ ಅಭಿಪ್ರಾಯದ ಮೂಲದಲ್ಲಿ ಕಂಡುಬರುತ್ತದೆ

೧) ಸಾಯಣಾದಿ ವೇದ ಭಾಷ್ಯಕಾರರ ಏಕಾಂಗಿ ಭಾಷ್ಯ

೨) ಮನುಷ್ಯನ ಪೂರ್ವಜರು ಕಾಡು ಮನುಷ್ಯರಾಗಿದ್ದರು.ಇದು ವಿಕಾಸವಾದಿ ಕಲ್ಪನೆ. ಈ ಎರಡು ಕಲ್ಪನೆಗಳ ಮೇಲೆ ವಿಚಾರಮಾಡುವುದು ಅಗತ್ಯವಿದೆ. ಆದರೂ ಕೂಡಾ ಒಂದು ಸ್ವತಂತ್ರ ಲೇಖನದ ವಿಷಯ ಆಗುತ್ತದೆ. ಆದ್ದರಿಂದ ಈಗ ಅದನ್ನು ಪಕ್ಕದಲ್ಲಿ ಇಡೋಣ ಮತ್ತು ಸಹಾನುಭೂತಿ ಅಥವಾ ರಸಿಕತೆಯ ದೃಷ್ಟಿಯಿಂದ ನೋಡಿದರೆ ವೇದಗಳ ಇಂತಹ ನಿಂದನೆಯನ್ನು ಸ್ವತಃ ವೇದಗಳಲ್ಲಿಯೆ ಮಾಡಲಾಗಿದೆ. ಉದಾ:-

ಋಚೂ ಅಕ್ಷರೆ ಪರಮೆ ವ್ಯೋಮನ್ ಯಸ್ಮಿನ್ ದೇವಾ ಅಧಿ ವಿಶ್ವೇ ನಿಷೇಧು:
ಯಸ್ ತನ್ ನ ವೇದ ಕೀ ಮೃಚ ಕರಿಶ್ಯತಿ –
– ಮ ಹಿತ್ ತತ್ ವಿಧುಸ ತ್ ಇಮೇ ಸಮಾಸತೇ (ಋಗ್ವೇದ.ಸ.೧೨೩.೧೨)

ಈ ಮಂತ್ರವನ್ನು ಶ್ವೇತಾಶ್ವತೋಪನಿಷತ್ತಿನಲ್ಲಿ ಸಮ್ಮಿಲಿತ ಮಾಡಲಾಗಿದೆ. ಇದರ ಭಾವ ಹೀಗೆ ಇದೆ "ಯಾವ ಮಹಾನ್ ಅಕ್ಷರದ ಮೇಲೆ ಅಂದರೆ ಓಂಕಾರದ ಮೇಲೆ ಸಮಸ್ತ ರುಚಾಗಳ ಕಟ್ಟಡವನ್ನು ನಿಲ್ಲಿಸಲಾಗಿದೆಯೂ ಆ ಅಕ್ಷರ ಯಾರಿಗೆ ಗೊತ್ತಿಲ್ಲವೊ ಅವರು ಋಗ್ವೇದವನ್ನು ತೆಗೆದುಕೊಂಡು ಏನು ಮಾಡುವವರು?."

ಈಗ ಋಗ್ವೇದದ ಸಮಯದಲ್ಲಿಯೇ ಋಗ್ವೇದದ ಋಷಿಯ ಮನಸ್ಸಿನಲ್ಲಿ ಋಗ್ವೇದದ ಬಗ್ಗೆ ಪೂಜ್ಯ ಬುದ್ಧಿ ಕಡಿಮೆಯಾಗಿತ್ತು. ಇಲ್ಲವೆ ಅವನಿಗೆ ಋಗ್ವೇದದ ವಿರುದ್ಧ ಬಂಡಾಯ ಹೇಳಬೇಕಿತ್ತು ಇದನ್ನು ಹೇಳಲು ಸಾಧ್ಯವಿಲ್ಲ.

ಈ ವೇದ-ವಾಕ್ಯದಿಂದ ಇಷ್ಟಂತು ಅರ್ಥ ಹೊರಡುತ್ತದೆ ಅಂದರೆ ಓಂಕಾರ ಎಲ್ಲ ವೇದಗಳಿಗಿಂತ ಹೆಚ್ಚು ಮಹತ್ವದಾಗಿದೆ ಮತ್ತು ಇದೆ ಮಾತನ್ನೆ ಉಪನಿಷತ್ತು ಅಥವಾ ಗೀತೆಕೂಡ ಹೇಳುತ್ತದೆ ಎಂಬುದು ಸ್ಪಷ್ಟ. ಓಂ ಅಕ್ಷರ ಎಲ್ಲ ವೇದಗಳ ಸಾರ ಮತ್ತು ಶಾಸ್ತ್ರಗಳ ಮೂರ್ತಿಯಾಗಿದೆ ಮತ್ತು ಇದೆ ಮಾತನ್ನು ಅನೇಕ ಸ್ಥಾನಗಳಲ್ಲಿ ಸ್ಪಷ್ಟವಾಗಿ ಹೇಳಲಾಗಿದೆಯೆಂದು ಋಷಿಗಳ ಕಲ್ಪನೆಯಾಗಿದೆ. ಪೃಥ್ವಿ ಎಲ್ಲ ಭೂತಗಳ ರಸ, ಪೃಥ್ವಿಯ ರಸ ಆಫ್, ಆಫ್‌ದ ರಸ ಔಷಧಿ, ಔಷಧಿ ರಸ ಪುರುಷ, ಮತ್ತು ಮುಂದೆ ವಾಕ್ ರುಕ್ ಸಾಮ ಮತ್ತು ಅಂತ್ಯದಲ್ಲಿ ಓಂ ಇಲ್ಲವೆ ಉದ್ಗೀಥ. ಹೀಗೆ ಛಾಂದೋಗ್ಯದ ಪ್ರಾರಂಭದಲ್ಲಿ ಉತ್ತರೋತ್ತರ ಉತ್ಕೃಷ್ಟ ರಸಗಳ ಪರಂಪರೆಯನ್ನ ಕೊಟ್ಟು ಏಳು ಜರಡಿಗಳ ಮೂಲಕ ಸೋಸಿದ ಈ ಎಂಟನೇ ಸರ್ವೋತ್ತಮ ರಸೆಯಿದೆ ಹೀಗೆಂದು ಈ ರಸದ ಒಟ್ಟು ಗೂಡುವಿಕೆಯ ವರ್ಣನೆ ಮಾಡಲಾಗಿದೆ. ಈ ಎಂಟನೆಯದು ಸರ್ವೋತ್ತಮ ರಸವಿದೆ.

ಮುನುಷ್ಯ ಮತ್ತು ಪಶುವಿನ ಮಧ್ಯ ಬಾಹ್ಯ-ಭೇದ ವಾಣಿಯ ರೂಪದಲ್ಲಿ ಸ್ಪಷ್ಟವಾಗಿ ಕಂಡುಬರುತ್ತಿದೆ. ಆದ್ದರಿಂದ ವಾಕ್ ಪುರುಷನ ರಸ, ವಾಚಾದ ರಸ 'ರುಕ್' ಎಂದು ಹೇಳಲಾಗಿದೆ. 'ರುಕ್' ಯಜಸ್ ಸಾಮ ಇವು ಕ್ರಮವಾಗಿ ಜ್ಞಾನ, ಕರ್ಮ ಮತ್ತು ಭಕ್ತಿ ಸೂಚಿಸುವ ಶಬ್ದಗಳಾಗಿವೆ. ರುಕ್ ಶಬ್ದ (ರುಚ ಧಾತುವಿನಿಂದ ಉತ್ಪನ್ನವಾಗಿದೆ. ಅದು ಗತಿ, ಜ್ಞಾನ, ಪ್ರಕಾಶ, ಇತ್ಯಾದಿಗಳನ್ನು ಸೂಚಿಸುತ್ತದೆ. 'ಅರ್ಕ' ಎಂದರೆ ಸೂರ್ಯ. ಈ ಶಬ್ದ ಕೂಡಾ ಇದೇ ಪರಿವಾರದ್ದಾಗಿದೆ. 'ಯಜುಸ್' ಶಬ್ದ ಯಜ್ ಧಾತುವಿನಿಂದ ಹೊರಟಿದೆ. ಅದರ ಅರ್ಥ ನಿಷ್ಕಾಮ ಕರ್ಮ ಯಜ್ಞವಾಗುತ್ತದೆ, ಸಾಮ ಶಬ್ದ 'ಹೃದಯಾಸ್ಥ' 'ಸಮತದ'ದ ದ್ಯೋತಕ. ಎಂದು ಪ್ರತೀತವಾಗಿದೆ. ಏಕೆಂದರೆ ***ಸರ್ವೇಣಾ ಸಮಃ ತೇನಾ ಹರಿವಣಾ ನ ಪಾಹೇಚಿ ಜ್ಯುದ್ಯೇಪಣಾ*** (ಭೂತ ಮಾತ್ರದಲ್ಲಿ ಹರಿಯ ಹೊರತು ಬೇರೆ ಯಾವುದು ಕಾಣುವುದಿಲ್ಲ.) ಇಂಥ ಸಮತೆಯೇ ಭಕ್ತಿಯ ಸ್ವರೂಪವಾಗಿರುವುದರಿಂದ ಸಾಮವೇದಾನಮ್ ಸಾಮವೇದೋಸ್ಮಿ-ಎಲ್ಲವೇದಗಳಲ್ಲಿ ಸಾಮವೇದ ನನ್ನ ವಿಭೂತಿಯಿದೆ ಎಂದು ಭಗವಂತ ಹೇಳಿದ್ದಾನೆ ಮತ್ತು ಅದೇ ಅರ್ಥದಲ್ಲಿ ಸಾಮವೇದವನ್ನು ಋಗ್ವೇದದ ರಸ ಅಥವಾ ಸಾರವೆಂದು ಹೇಳಲಾಗಿದೆ ಆದರೆ ಈ ಸಾಮದಿಂದ ಸಮತ್ವಬುದ್ಧಿಯಿಂದ ಓಂಕಾರದ ಜನ್ಮ, ಆದ್ದರಿಂದ ಓಂಕಾರ ಸಾಮವೇದದ ನಿಷ್ಕರ್ಷ ಅಥವಾ ರಸ ಎಂದು ಸುಲಭವಾಗಿ ಹೇಳಬಹುದಾಗಿದೆ. ಸಾರಾಂಶ ರುಕ್ ಸಾಮ ಯಜುರೇವ ಚ ಮೂರೂ ಜೀವನದ ಆದ್ಯತತ್ವ ಆಗಿರುವ ಕಾರಣ ಅಂತ್ಯದಲ್ಲಿ ಸರ್ವ ವೇದೇಷು ದ ಅನುಸಾರ ಓಂಕಾರವಿದೆ. ಅದೇ ವಾಗ್ಮಯಿ ದೃಷ್ಟಿಯಿಂದ ಈಶ್ವರನ ಅಂತಿಮ ರೂಪ. ಮಾಧುರ್ಯೇ ಚಂದ್ರಿಕಾ ಸರಸೀ ರಾಯ ರಂಕ (ಬೆಳದಿಂಗಳ ಮಾಧುರ್ಯ ರಾಜ ಮತ್ತು ರಂಕ್ ಇವುಗಳು ಸಮಾನ ರೂಪದಲ್ಲಿ ದೊರೆಯುತ್ತದೆ.) ಈ ದೃಷ್ಟಾಂತದ ಅನುಸಾರ ಸೋಮರಾಜನಿಗೆ ಸಾಮದ ಉಪಮೇಯನ್ನು ಕೊಟ್ಟರೆ ಅದರ ಮೇಲಿಂದೂ ಕೂಡ ಓಂಕಾರದ ಮೊಹರ್ ಬಿದ್ದಿದೆ ಇಂದು ಕೂಡಾ ಆ ಮೊಹರ್‌ನ ದರ್ಶನವನ್ನು ಎಲ್ಲ ಜನರಿಗೆ ಕಲಂಕ ರೂಪದಲ್ಲಿ ಆಗುತ್ತದೆ. ಈ ಓಂಕಾರ ಮುದ್ರಾದಿಂದ ಅಂಕಿತವಾಗುವ ಕಾರಣದಿಂದ ಬಹುಶಃ ಶಂಕರನು ಅದನ್ನು ತನ್ನ ಮಸ್ತಕದ ಮೇಲೆ ಧಾರಣ ಮಾಡಿರಬಹುದು.

* * *

ಕೇಜ್ರೀವಾಲ್, ಅಂಬಾನಿ ಮತ್ತು ಮಾಧ್ಯಮ

– ಪ್ರಶಾಂತ್ ಭೂಷಣ್

ಈ ಕೆಳಗೆ ಅರವಿಂದ ಕ್ರೇಜಿವಾಲ ಮುಖೇಶ ಅಂಬಾನಿಯವರಿಗೆ ಬರೆದ ಒಂದು ಮಹತ್ವದ ಪತ್ರ ಒಂದನ್ನು ಲಗತ್ತಿಸಿದ್ದನೆ. ಆ ಪತ್ರವು ಒಂದು ರೀತಿಯಲ್ಲಿ ಅರವಿಂದರ ಪತ್ರಿಕಾ ಹೇಳಿಕೆಗಳ ವಿರುದ್ಧ ಭಯಪಡಿಸುವುದೆ ಆಗಿದೆ. ಹಿಂದು ಪೇಪರಲ್ಲದೆ ಇನ್ನು ಬಹುಪಾಲು ಮುಖ್ಯವಾಹಿನಿಯ ಪತ್ರಿಕೆಗಳು ಈ ಪತ್ರವನ್ನು ಪ್ರಕಟಿಸಲು ಧೈರ್ಯಮಾಡಿಲ್ಲ.

ಪ್ರಿಯ ಶ್ರೀ ಮುಖೇಶ ಅಂಬಾನಿ, ನೀವು ಇತ್ತೀಚಿಗೆ ಅನೇಕ ಟಿ.ವಿ ಚಾನಲ್‌ಗಳಿಗೆ ಮಾನ ಹಾನಿ ನೋಟಿಸ್ ಕಳುಹಿಸಿದ್ದೀರಿ. ಅವುಗಳ ಅಪರಾಧವೇನೆಂದರೆ ಅವು ೩೧ ಅಗಸ್ಟ ೨೦೧೨ ಮತ್ತು ೯ ನವೆಂಬರ್ ೨೦೧೨ ರಂದು ನಾನು ಮತ್ತು ಅರವಿಂದ ಕೆಜ್ರೀವಾಲ ನಡೆಸಿದ ಪತ್ರಿಕಾ ಗೋಷ್ಠಿಯನ್ನು ಬಿತ್ತರಿಸಿದ್ದಾಗಿದೆ. ನೀವು ಸರಕಾರದ ಮೇಲೆ ಆಕ್ರಮವಾಗಿ ಒತ್ತಡ ತಂದು ಗ್ಯಾಸಿನ ಬೆಲೆಯನ್ನು ಹೇಗೆ ಹೆಚ್ಚಿಸಕೊಂಡಿರಿ ಎಂಬುದನ್ನು ದೇಶಕ್ಕೆ ತಿಳಿಸುವುದೆ ನಮ್ಮ ಉದ್ದೇಶವಾಗಿತ್ತು. ನಿಮ್ಮ ಸಂಗಡಿಗರು ಮತ್ತು ನಿಮ್ಮ ಕಂಪನಿಗಳು ಸ್ವಿಸ್ ಬ್ಯಾಂಕುಗಳಲ್ಲಿ ಕಪ್ಪು ಹಣವನ್ನು ತೊಡಗಿಸಿದ್ದಿರಾ ಎಂಬುದನ್ನು ಕೂಡಾ ದೇಶಕ್ಕೆ ತಿಳಿಸಿದೆವು. ಅನೇಕ ಟಿ.ವಿ ಮಾಧ್ಯಮಗಳು ನಮ್ಮ ಈ ರಹಸ್ಯ ಸ್ಫೋಟವನ್ನು ಯಥಾವತ್ತಾಗಿ ಬಿಂಬಿಸಿದವು. ಈಗ ಈ ಎಲ್ಲಾ ಟಿ.ವಿ ಚಾನಲಗಳು ನಿಮ್ಮಿಂದ ಮಾನ ಹಾನಿ ನೋಟಿಸನ್ನು ಪಡೆದಿವೆ. ನಾನು ದಿಗ್‌ಭ್ರಾಂತನಾಗಿದ್ದೇನೆ. ಏಕೆಂದರೆ ಪ್ರಶಾಂತ ಭೂಷಣ ಮತ್ತು ನಾನು ಕೊಟ್ಟ ಹೇಳಿಕೆಯಿಂದ ನಮಗೆ ಕೆಟ್ಟ ಹೆಸರು ಬಂದಿದೆಯಾದರೆ ಅದರ ನಿಜವಾದ ಅಪರಾಧಿಗಳು ನಾವು. ಮಾನಹಾನಿ ನೋಟಿಸನ್ನು ಕಳುಹಿಸಬೇಕಾದರೆ ಅದು ನಮಗೆ. ಟಿ.ವಿ ಮಾಧ್ಯಮಗಳಿಗೆ ಅಲ್ಲ. ಅವು ಕೇವಲ ನಾವು ಹೇಳಿದನ್ನು ಮಾತ್ರ ಬಿತ್ತರಿಸಿವೆ. ಇದು ಸತ್ಯ ಸಂಗತಿಯಾಗಿದ್ದರೂ ನೋಟಿಸನ್ನು ನಮಗೆ ಕಳಿಹಿಸದೆ ಟಿ.ವಿ. ಚಾನಲ್‌ಗಳಿಗೆ ಕಳುಹಿಸಿದ್ದೀರಿ, ಇದರ ಉದ್ದೇಶ ಟಿ.ವಿ ಚಾನಲ್‌ಗಳನ್ನು ನಿಮ್ಮ ಪರಿಚಾರಕರನ್ನಾಗಿ ಮಾಡುವುದೆ ನಿಮ್ಮ ಉದ್ದೇಶವೆಂದು ಸ್ಪಷ್ಟವಾಗುತ್ತದೆ.

ಭಾರತ ದೇಶದ ಜನರು ನಿಮಗೆ ಕೆಲವು ನೇರ ಪ್ರಶ್ನೆಗಳನ್ನು ಕೆಳಬಯಸುತ್ತಾರೆ.

ಭಾರತ ಸರಕಾರ ಸ್ವೀಸ್ ಬ್ಯಾಂಕಿನಲ್ಲಿ ಹಣ ಇಟ್ಟಿರುವವರ ಪಟ್ಟಿಯನ್ನು ಹೊಂದಿದೆ. ಆ ಪಟ್ಟಿಯಲ್ಲಿ ನಿಮ್ಮ ಹೆಸರು ಮತ್ತು ನಿಮ್ಮ ಸಂಬಂಧಿಕರು ಹೆಸರು ನಿಮ್ಮ ಸ್ನೇಹಿತರು ಮತ್ತು ನಿಮ್ಮ ಕಂಪನಿಗಳ ಹೆಸರು ಇರುವುದು ನಿಜವಲ್ಲವೆ?

ನಿಮ್ಮ ಹೆಸರಿನ ಖಾತೆಯಲ್ಲಿ ೧೦೦ ಕೋಟಿ ರೂಪಾಯಿಗಳು ಇರುವುದು ನಿಜವಲ್ಲವೆ. ಸರಕಾರಕ್ಕೆ ಈ ಪಟ್ಟಿ ದೊರತ ಮೇಲೆ ಅಲ್ಲವೆ ನೀವು ತೇರಿಗೆಯನ್ನು ಸಂದಾಯ ಮಾಡಿದ್ದು? ನಿಜವಲ್ಲವೆ.

ಮೇಲಿನ ಸಂಗತಿ ನಿಜವಿದ್ದಲ್ಲಿ ನಮಗನಿಸುವಂತೆ ನಿಜವೆ ಆಗಿದೆ. ಅಂದರೆ ನೀವು ನಿಮ್ಮ ತಪ್ಪನ್ನು ಒಪ್ಪಿಕೊಂಡಂತಾಗಿದೆ. ದೇಶದ ಕಾನೂನಿನ ಅನ್ವಯ ನಿಮ್ಮನ್ನು ವಿಚಾರಣೆಗೆ ಗುರಿಪಡಿಸಬೇಕಾಗುತ್ತದೆ ಮತ್ತು ತೆರಿಗೆಗಳ್ಳತನ ಸಿದ್ದವಾದರೆ ನಿಮ್ಮನ್ನು ಕಾರಾಗೃಹಕ್ಕೆ ಕಳುಹಿಸಬೇಕು.

ಆದರೆ ಇದು ಎಂದೂ ಆಗುವುದಿಲ್ಲ ಏಕೆ? ಏಕೆಂದರೆ ನೀವು ಭಾರತ ಸರಕಾರವನ್ನು ಹೆದರಿಸಿದ್ದೀರಿ. ಕಾಂಗ್ರೇಸ್ ಪಕ್ಷವೆ ನಿಮ್ಮಿಂದ ಖರಿದಿಸಲ್ಪಟ್ಟಿದೆ ಎಂಬುದಾಗಿ ವರದಿಯಾಗಿದೆ ಸರಿಯಾಗಿ ಹೇಳಬೇಕೆಂದರೆ ಕಾಂಗ್ರೆಸ್ ಪಕ್ಷವೆ ನಿಮ್ಮ ಅಂಗಡಿಯಂತಿದೆ ಕೆಲವು ಮಾಧ್ಯಮಗಳ ವರದಿಯ ಪ್ರಕಾರ ಸೊನಿಯಾಗಾಂಧಿ ಕೆಲವೊಂದು ಸಲ ನಿಮ್ಮ ಸ್ವಂತ ವಿಮಾನದಲ್ಲಿ ಪ್ರವಾಸ ಮಾಡುತ್ತಾರೆ. ಜೈಪಾಲ ರೆಡ್ಡಿಯವರನ್ನು ಅವರ ಮಂತ್ರಿ ಪದವಿಯಿಂದ ವರ್ಗಾಯಿಸಿದ್ದು ನಿಮ್ಮ ಪ್ರಭಾವದಿಂದಾಗಿ ಎಂದು ಜನ ನಂಬುತ್ತಾರೆ.

ಕೇವಲ ಕಾಂಗ್ರೆಸ್ ಏಕೆ? ಬಿ.ಜೆ.ಪಿ ಮತ್ತು ಇನ್ನು ಅನೇಕ ಪಕ್ಷಗಳು ನಿಮ್ಮ ಜೇಬಿನಲ್ಲಿವೆ. ಮೊದ ಮೊದಲು ಅಡ್ವಾನಿಯವರು ಸ್ವಿಸ್ ಬಾಂಕಿನಲ್ಲಿಯ ಲೆಕ್ಕಗಳ ಬಗ್ಗೆ ತುಂಬಾ ಗಲಾಟೆ ಮಾಡುತ್ತಿದ್ದರು. ಆದರೆ ನಿಮ್ಮ ಅಲ್ಲಿಯ ಲೆಕ್ಕಗಳನ್ನು ಬಹಿರಂಗಪಡಿಸಿದ ಮೇಲೆ ಅವರು ಒಮ್ಮಲೆ ಸುಮ್ಮನಾಗಿ ಬಿಟ್ಟಿದ್ದಾರೆ ಬಿ.ಜೆ.ಪಿ ಪಾರ್ಲಿಮೆಂಟಿನಲ್ಲಿ ನಿಮ್ಮ ಲೆಕ್ಕಗಳ ಬಗ್ಗೆ ಒಂದೆ ಒಂದು ಮಾತು ಆಡಿಲ್ಲ.

ಬಹುಶಃ ದೇಶದ ಎಲ್ಲಾ ಪಕ್ಷಗಳು ನಿಮ್ಮನ್ನು ಕಂಡರೆ ಭಯಪಡುತ್ತವೆ. ಅನೇಕ ನಾಯಕರು ನಿಮ್ಮ ಬಗ್ಗೆ ಭೀತಿಗೊಂಡಿದ್ದಾರೆ. ಆದರೆ ದೇಶದ ಜನ ನಿಮ್ಮಿಂದ ಭೀತಿಗೊಂಡಿಲ್ಲ. ಎಲ್ಲಾ ಪಕ್ಷಗಳು ನಿಮ್ಮ ಅಂಗಡಿಯಾಗಿರಬಹುದು. ಆದರೆ ಭಾರತ ಮಾರಟಕ್ಕೆ ಇಲ್ಲ. ಭಾರತ ನಮ್ಮದು. ಅದು ಈ ದೇಶದ ಜನರಿಗೆ ಸೇರಿದ್ದು. ನೀವು ರಾಜಕೀಯ ಪಕ್ಷಗಳನ್ನು ಖರೀದಿಸಬಹುದು ಆದರೆ ನಾವು ಭಾರತವನ್ನು ಮಾರಟವಾಗಲು ಬಿಡುವುದಿಲ್ಲ.

ನಮ್ಮ ಪತ್ರಿಕಾ ಸಮ್ಮೇಳನವನ್ನು ಯಥಾವತ್ತಾಗಿ ಟಿ.ವಿ ಚಾನಲ್‌ಗಳು ಬಿತ್ತರಿಸಿ ನಿಮ್ಮ ಘನತೆಗೆ ಕುಂದು ತಂದಿವೆ ಎಂದು ನೀವು ಹೇಳುತ್ತೀರಿ. ೨೦೦೨ರಲ್ಲಿ ನೀವು ಒಂದು ಕೋಟಿ ರೂಪಾಯಿಗಳ ಶೇರುಗಳನ್ನು ಪ್ರಮೊದ ಮಹಾಜನರವರಿಗೆ ಕೊಟ್ಟರಿ. ಶೇರುಗಳು ಮಾರುಕಟ್ಟೆಯ ಬೇಲೆ ೧ಕ್ಕೆ ೫೫ ರೂಪಾಯಿಗಳು ಇತ್ತು. ಅದನ್ನು ಕೇವಲ ೧ ರೂಪಾಯಿಗೆ ಒಂದು ಶೇರಿನಂತೆ ಮಾರಿದಿರಿ. ಇದು ನಿಮ್ಮ ಸ್ವಚ್ಛದಂತೆಗೊಸ್ಕರ ಕೊಟ್ಟ ಲಂಚವಲ್ಲದೆ ಏನು? ನೀವು ಈ ಸಂಬಂಧವಾಗಿ ಸಿಕ್ಕಿಕೊಂಡಾಗ ಆ ಶೇರುಗಳನ್ನು ಹಿಂದಕ್ಕೆ ಪಡೆದಿರಿ. ಈಗ ಆ ವಿಷಯ ಕೋರ್ಟಿನಲ್ಲಿದೆ. ಈ ರೀತಿ ಮಾಡುವುದರಿಂದ ನೀವು ನಿಜವಾಗಿಯೂ ನಿಮ್ಮ ಹೆಸರನ್ನು ಕೆಡಿಸಿಕೊಳ್ಳಲಿಲ್ಲವೆ.

ನಿಮ್ಮ ಬಹು ಅಂತಸ್ತಿನ ಕಟ್ಟಡವನ್ನು ವಕ್ಫ್ ಭೂವಿಯಲ್ಲಿ ಕಟ್ಟಿದ್ದಿರಿ. ಆ ಭೂಮಿ ಒಂದು ಅನಾಥಲಾಯಕ್ಕಾಗಿ ತೆಗೆದಿರಿಸಲಾಗಿತ್ತು. ನೀವು ಇಸ್ಲಾಂ ಧರ್ಮದ ಬಡ ಮತ್ತು ಅನಾಥ ಮಕ್ಕಳ ಹಕ್ಕನ್ನು ಕದ್ದಿರಿ. ಇಂತಹ ಕೆಲಸವನ್ನು ಮಾಡುವುದರಿಂದ ನಿಮ್ಮ ಹೆಸರನ್ನು ನೀವೆ ಕೆಡಿಸಿಕೊಂಡಿದ್ದೀರಿ ಎಂದು ಯೋಚಿಸುವುದಿಲ್ಲವೆ.

ಕಾರ್ಯಕ್ಷೇತ್ರ ಮತ್ತು ಶೈಕ್ಷಣಿಕ ಕ್ಷೇತ್ರಗಳಲ್ಲಿ ಇಂದು ಗಾಂಧಿ (ವಿದೇಶಿಯನೊಬ್ಬನ ಟಿಪ್ಪಣಿಗಳು)

– ಥಾಮಸ್ ವೆಬರ್

ನಾನು ಭಾರತಕ್ಕೆ ಮೊದಲ ಬಾರಿಗೆ ಹೋದದ್ದು ೧೯೭೫. ಆಗ ನಾನು ಒಬ್ಬ ಯುವಕ. ಭಾರತದ ಬಗ್ಗೆ ಮತ್ತು ಆ ದೇಶದ ಪ್ರಸಿದ್ಧ ಪುತ್ರನ ಬಗ್ಗೆ ತೀವ್ರ ಆಸಕ್ತಿ ಇತ್ತು. ನಂತರ ನಾನು ೧೯೭೮ ರಲ್ಲಿ ಪುನಃ ಬಂದೆ. ಗಾಂಧಿಯನ್ನು ನೋಡುವುದಕ್ಕಾಗಿಯೇ ಬಂದೆ. ಆ ನಂತರ ಗಾಂಧಿಯನ್ನು ಹುಡಿಕಿಕೊಂಡು ೧೨ ಬಾರಿ ಬಂದೆ. ಈಗ ನಾನು ೩ ವರ್ಷಕ್ಕೂ ಮಿಗಿಲಾಗಿ ಭಾರತದಲ್ಲೆ ಕಾಲ ಕಳೆದಿದ್ದೀನೆ. ಅದರಲ್ಲಿ ಬಹು ಪಾಲು ಸಮಯವನ್ನು ಗಾಂಧಿ ಆಶ್ರಮಗಳಲ್ಲಿ, ಇಲ್ಲವೆ ಗಾಂಧಿ ಗ್ರಂಥಾಲಯಗಳಲ್ಲಿ, ಇಲ್ಲವೆ ಹಳೆಯ ಗಾಂಧಿವಾದಿಗಳ ಜೊತೆ ಮಾತುಕತೆಗಳಲ್ಲಿ ಕಳೆದಿದ್ದೇನೆ. ಅವರಲ್ಲಿ ಕೆಲವರು ತೀರಿಕೊಳ್ಳುವ ಮುನ್ನ ನನ್ನ ಸ್ನೇಹಿತರಾಗಿದ್ದರು. ಈ ಎಲ್ಲಾ ಕಾರಣಗಳಿಂದಾಗಿ ಭಾರತದಲ್ಲಿ 'ಗಾಂಧಿವಾದದ' ಬಗ್ಗೆ ಟಿಪ್ಪಣಿ ಮಾಡುವ ಕೊಂಚ ಅರ್ಹತೆ ನನಗೆ ಇದೆ ಎಂದು ಭಾವಿಸಿದ್ದೇನೆ. ನಾನೊಬ್ಬ ವಿದೇಶಿಯಾದ್ದರಿಂದ ನನಗೆ ಯಾವುದೆ ಒಂದು ನಿಲುವನ್ನು ತಳೆಯಲು ರಾಜಕೀಯ ಹಿತಾಸಕ್ತಿಯಾಗಲಿ ರಾಜಕೀಯ ಲಾಭ ಮಾಡಿಕೊಳ್ಳುವುದಾಗಲಿ ಇರುವುದಿಲ್ಲ.

ಈ ವರ್ಷದ ಜುಲೈ ಮಾಹೆಯಲ್ಲಿ ಭಾರತಕ್ಕೆ ಹಿಂದಿರುಗುವ ತಯಾರಿಯಲ್ಲಿದ್ದಾಗ ಭಾರತದಲ್ಲಿ ಇನ್ನೊಂದು ಗಾಂಧಿ ಸಂಶೋಧನಾ ಕೇಂದ್ರ ಸ್ಥಾಪಿತವಾಗುತ್ತಿದೆ ಎಂಬ ಪ್ರಕಟಣೆ ನೋಡಿದೆ. ಈ ಬಾರಿ ಅಂತಹದೊಂದು ಕೇಂದ್ರ ಜಳಗಾಂವ ನಂತಹ ಸಂಪರ್ಕ ರಹಿತ ಪ್ರದೇಶದಲ್ಲಿ ಆಗುವುದರಲ್ಲಿತ್ತು. ಇದಕ್ಕೆ ನನ್ನ ತಕ್ಷಣದ ಪ್ರತಿಕ್ರಿಯೆ ಹೀಗೆ ಇತ್ತು; ಇದು ದೊಡ್ಡ ವಿಷಯವಲ್ಲವೆ. ಹಾಗಾದರೆ ಗಾಂಧಿ ಬಗ್ಗೆ ಬಹು ದೊಡ್ಡ ಪ್ರಮಾಣದ ಆಸಕ್ತಿ ಇರಲೇ ಬೇಕು ಆದರೆ ಅದೇ ಹೊತ್ತಿಗೆ ಇನ್ನೊಂದು ಪ್ರಶ್ನೆಯೊಂದು ನನ್ನ ಮನಸ್ಸಿಗೆ ಬಂತು; ಉನ್ನತ ಗುಣಮಟ್ಟದ ಗಾಂಧಿ ಸಂಶೋಧನಾ ಸಂಸ್ಥೆಗಳನ್ನು ಭಾರತ ಎಷ್ಟು ಹೊಂದಲು ಸಾಧ್ಯ? ಆಗ ನನ್ನ ಮನಸ್ಸಿನಲ್ಲಿ ಸುಳಿದಾಡುತ್ತಿದ್ದ ಪ್ರಶ್ನೆಯೇನೆಂದರೆ ಅಂತಹ ಸಂಸ್ಥೆಗಳ ಮೂಲಕ ಯಾವ ಪ್ರಕಾರದ ಗುಣಮಟ್ಟದ ಸಂಶೋಧನೆ ಹೊರ ಬರುತ್ತದೆ ಎಂಬುದು. ಅವು ಗಾಂಧಿ ಬಗ್ಗೆ ನಿಜವಾದ ಸೈದ್ಧಾಂತಿಕ ಆಸಕ್ತಿಯೋ ಅಥವಾ ಅದು ಕೇವಲ ವಿವಿಧ ವಿಶ್ವ ವಿದ್ಯಾನಿಲಯಗಳು ತಮ್ಮ ಮೇಲ್ಪಟ್ಟವರನ್ನು ಓಲೈಸುವ ಕ್ರಿಯೆಯೊ? ಈ ಸ್ಪರ್ಧೆಯಲ್ಲಿ ಅವು ಹಿಂದೆ ಬೀಳುವುದನ್ನು ಸಹಿಸಲಾರವು ಗಾಂಧಿವಾದಿಗಳ ಕಣ್ಮರೆಯಿಂದ ಉಂಟಾಗಿರುವ ನಷ್ಟವನ್ನು ತುಂಬುವುದಕ್ಕಾಗಿ ಈ ಸಂಸ್ಥೆಗಳು ಗಾಂಧಿ ತತ್ವವನ್ನು ಕೊಡುವುದಾಗಿದೆಯೇ? ಕ್ರೀಯಾಶೀಲರಾಗಿದ್ದ ಗಾಂಧಿವಾದಿಗಳು ನಿಧಾನವಾಗಿ ಕಣ್ಮರೆಯಾಗುತ್ತಿದ್ದರೂ ಗಾಂಧಿವಾದವು ಉತ್ಕೃಷ್ಟವಾಗಿದೆ ಎಂಬ ಭ್ರಮಾಲೋಕಕ್ಕೆ

ನಾವು ಹೋಗುವಂತೆ ಈ ಸಂಸ್ಥೆಗಳು ಜೋಗುಳ ಹಾಡುತ್ತಿವೆ?

ಕೆಲವು ವರ್ಷಗಳ ಹಿಂದೆ ಇಂದಿರಾಗಾಂಧಿ ರಾಷ್ಟ್ರೀಯ ಮುಕ್ತ ವಿಶ್ವ ವಿದ್ಯಾನಿಲಯದಲ್ಲಿ ಗಾಂಧಿ ಅಧ್ಯಯನದ ಎಮ್.ಫಿಎಲ್ ಡಿಗ್ರಿಗಾಗಿ ಅಧ್ಯಯನ ಪಠ್ಯಕ್ರಮವನ್ನು ತಯಾರಿಸುವ ಸಭೆಗಳಿಗೆ ನಾನು ಹೋಗಿದ್ದೆ. ಆ ಸಭೆಯಲ್ಲಿ ಇದ್ದವರಲ್ಲಿ ಬಹಳ ಜನ ಅಧ್ಯಾಪಕರು, ವಿಶ್ವವಿದ್ಯಾನಿಲಯಗಳಲ್ಲಿ ಗಾಂಧಿ ತತ್ವ ಶಾಸ್ತ್ರವನ್ನು ಬೋಧಿಸುವಂಥವರಾಗಿದ್ದರು. ಇಲ್ಲವೆ ಗಾಂಧಿಗೆ ಸಂಬಂಧಿಸಿದ ವಿಷಯಗಳಲ್ಲಿ ಬೋಧಿಸುವಂತಹ ಅಧ್ಯಾಪಕರೆ ಆಗಿದ್ದರು. ಆಗ ಮೊದಲು ಬಂದಿದ್ದ ಪ್ರಶ್ನೆಗಳಂತೆಯೆ ಪುನಃ ಪ್ರಶ್ನೆಗಳು ಉದ್ಭವಿಸಿದವು. ಏಕೆಂದರೆ ಆಗ ನಾನು ಗಾಂಧಿ ತತ್ವ ಶಾಸ್ತ್ರವನ್ನು ಶೈಕ್ಷಣಿಕ ಕ್ಷೇತ್ರದಲ್ಲಿ ವಿಸ್ತರಿಸಲು ಹೆಣಗಾಡುತ್ತಿದ್ದೆ. ಗಾಂಧಿ ಸಂಶೋಧನಾ ಸಂಸ್ಥೆಗಳ ಸಂಖ್ಯೆ, ಕ್ಷೇತ್ರ ಮಟ್ಟದ ಗಾಂಧಿ ಕೋರ್ಸಗಳು ಮತ್ತು ಗಾಂಧಿ ಪತ್ರಿಕೆಗಳ ಸಂಖ್ಯೆ ಅಸಾಧರಣವಾಗಿ ಬೆಳದಿದೆ. ಸಂಕ್ಷಿಪ್ತವಾಗಿ ಹೇಳುವುದಾದರೆ ಒಂದು ಕಾಲಕ್ಕೆ ಸಕ್ರಿಯತೆಯು ಗಾಂಧಿ ಸಮುದಾಯದ ಮುಖ್ಯ ವೃತ್ತಿಯಾಗಿತ್ತು. ಈಗ ಕೇವಲ ಗಾಂಧಿ ವಿಷಯದ ಅಧ್ಯಯನಕ್ಕೆ ಸೀಮಿತವಾಗಿದೆ. ಹಾಗೆ ನೋಡಿದರೆ ಬೋಧನಾಶಾಸ್ತ್ರ ಮತ್ತು ಸಂಶೋಧನೆ ಅಂತಹ ಕೆಟ್ಟ ಸಂಗತಿಗಳಲ್ಲ. ಗಾಂಧಿ ನಂತರದ ಉಚ್ಛ್ರಾಯ ಕಾಲದಲ್ಲಿ ಗಾಂಧಿವಾದಿ ಚಳುವಳಿಯ ಕಾಲದಲ್ಲಿ, ಜೆ.ಪಿ.ಮತ್ತು ವಿನೋಬಾರವರ ಕಾಲದಲ್ಲಿ ಸಕ್ರಿಯ ಕಾರ್ಯಕರ್ತರಿಗೆ ಶಿಬಿರಗಳು ಕ್ಯಾಂಪುಗಳು ಇದ್ದವು ಮತ್ತು ರಾಜ್‌ಘಾಟ ವಾರಣಾಸಿಯಲ್ಲಿರುವ ಗಾಂಧಿ ಅಧ್ಯಯನ ಸಂಸ್ಥೆ ಜೆ.ಪಿಯವರಿಂದ ಪ್ರೇರಣೆಗೊಂಡಿತ್ತು. ಆ ಕೇಂದ್ರ ಅಂತರಾಷ್ಟ್ರೀಯ ಮಟ್ಟದಲ್ಲಿ ಶಾಂತಿ ಮತ್ತು ಅಹಿಂಸೆಯ ಅಧ್ಯಯನಕ್ಕೆ ಕೇಂದ್ರಬಿಂದುವಾಗಿತ್ತು. ಆದರೆ ಈಗ ಗಾಂಧಿ ಭೋಧನಾ ಕ್ರಮ ಕೇವಲ ಸೈದ್ಧಾಂತಿಕವಾಗಿದೆ, ಗಾಂಧಿಯ ಬಗೆಗಿನ ಆಸಕ್ತಿ ಕೇವಲ ಶೈಕ್ಷಣಿಕವಾಗಿದೆ. ವ್ಯವಹಾರಿಕವಾಗಿಲ್ಲ. ಬಹುಶಃ ಸಮಯ ಬದಲಾಗಿದೆ. ಅನೇಕ ಗಾಂಧಿ ಕೋರ್ಸ್‌ಗಳನ್ನು ಮತ್ತು ಪತ್ರಿಕೆಗಳನ್ನು ಜೀವಂತವಾಗಿಡುವುದಕ್ಕೆ ಸಾಕಾಗುವಷ್ಟು ಶೈಕ್ಷಣಿಕ ಆಸಕ್ತಿ ಇದೆ ಇದು ಒಳ್ಳೆಯದು. ಅಲ್ಲದೆ ಗಾಂಧಿ ತಮ್ಮ ಹೆಸರಿನಲ್ಲಿ ಯಾವುದೇ ಪಂಥವನ್ನು ಸ್ಥಾಪಿಸಬಾರದೆಂಬ ವಿಷಯದಲ್ಲಿ ಹಠಮಾರಿಯಾಗಿದ್ದರು. ಅದ್ಯಾಕೊ ದೇಶದಲ್ಲಿ ಗಾಂಧಿ ಅಧ್ಯಯನಕ್ಕೆ ಸಂಬಂದಿಸಿದಂತೆ ಎಷ್ಟು ಕೋರ್ಸಗಳು ಇವೆ ಎಂಬುದನ್ನು ಎಣಿಕೆ ಮಾಡಲು ನನಗೆ ಸಾಧ್ಯವಾಗಿಲ್ಲ. ಅದೇ ರೀತಿ ಎಷ್ಟು ಸಂಶೋಧನಾ ಕೇಂದ್ರಗಳಿವೆ ಎಂಬುದು ತಿಳಿದು ಬಂದಿಲ್ಲ, ಆದರೆ ಇತ್ತೀಚೆಗೆ ಒಬ್ಬರು ನನಗೆ ತಿಳಿಸಿರುವ ಪ್ರಕಾರ ೪೦೦ಕ್ಕೂ ಹೆಚ್ಚು ಅಂತಹ ಕೇಂದ್ರಗಳಿವೆ. ಎಷ್ಟೊಂದು ಗಾಂಧಿ ಆಶ್ರಮಗಳು ವಸ್ತುಸಂಗ್ರಹಾಲಯಗಳಾಗಿವೆ ಎಂಬುದು ಗೊತ್ತಿಲ್ಲ. ಬಹುಶಃ ಗಾಂಧಿಯಲ್ಲಿಯ ಶೈಕ್ಷಣಿಕ ಆಸಕ್ತಿ, ಗಾಂಧಿವಾದಿಗಳೆ ಸ್ವತಃ ಕಣ್ಮರೆಯಾಗುತ್ತಿರುವಾಗ ಇದೆಲ್ಲವೂ ಸ್ವಾಭಾವಿಕ. ವರ್ಷಗಳು ಉರುಳಿದಂತೆ ಮತ್ತು ಹಳೆಯ ಗಾಂಧಿ ಜನ ಕಣ್ಮರೆಯಾಗಿ ಹೋದಂತೆಲ್ಲಾ ಅವರು ಸ್ಥಾಪಿಸಿದ ಆಶ್ರಮಗಳು ಚಿಕ್ಕ ವಸ್ತು ಸಂಗ್ರಾಲಯಗಳಾಗಿ ಮಾರ್ಪಡಾದವು. ಆದಾಗ್ಯೂ ಕಾಲಕ್ರಮೇಣ ಇದು ಚಿಗುರಬಹುದು. ಕ್ರಮೇಣ ಮತ್ತು ಕ್ರಮೇಣ ಗಾಂಧಿ ವಿಚಾರಕ್ಕೆ ಸ್ವರೂಪ ಬರಬಹುದು. ಇದುವರೆಗೆ ಒಟ್ಟು ಗಾಂಧಿ ಚಳುವಳಿಯ ಫಲಿತಾಂಶ

ಏನು ಎಂಬುದನ್ನು ತಿಳಿಯಲು ಬೇಕಾದ ಸಾಕ್ಷಾಧಾರವನ್ನು ಇದುವರೆಗೆ ಯಾರು ಸಂಗ್ರಹಿಸಿಲ್ಲವೆಂದು ಗೊತ್ತಾಗುತ್ತದೆ. ಆದರೆ ನನ್ನ ಮಟ್ಟಿಗೆ ಒಂದು ಪ್ರಶ್ನೆ ಇನ್ನು ಇದೆ. ಅದೇನೆಂದರೆ ಈ ಬೆಳವಣಿಗೆ ಉದ್ದೇಶ ಪೂರ್ವಕವಾಗಿ ಆಗದೆ ಹೋದರೂ ಅದು ಸಕಾರಾತ್ಮಕವಾಗಿತ್ತೆ? ಎಂಬುದು.

ಆ ಬೆಳವಣಿಗೆ ಕೇವಲ ಸಾಂಕೇತಿಕವಾಗಿರಬಹುದು ಗತಕಾಲದ ನನ್ನ ಸ್ಮರಣೆಯನ್ನು ಕೆದಕಿದರೆ ನಾನು ವಿಶೇಷವಾಗಿ ಗಾಂಧಿಯನ್ನು ಹುಡಿಕಿಕೊಂಡು ಭಾರತಕ್ಕೆ ಬಂದಾಗ ಇದ್ದ ಅನೇಕ ಗಾಂಧಿ ವಿಚಾರದ ಜನರು ಚರಕದ ಮೇಲೆ ದಾರ ತೆಗೆಯುತ್ತಿದ್ದರು. ಮತ್ತು ತಾವು ನೂತ ದಾರವನ್ನು ಒಬ್ಬರು ಇನ್ನೊಬ್ಬರಿಗೆ ಕೊಟ್ಟು ಸ್ವಾಗತಿಸುತ್ತಿದ್ದರು. ಈಗ ಮೇಲ್‌ತೋರಿಕೆಯ ಗಾಂಧಿ ಪ್ರಣಿತ ಸಂಸ್ಥೆಗಳಲ್ಲಿ ಯಾರೊಬ್ಬರು ವ್ರತದಾರಿಯಂತೆ ನೂಲುವುದಿಲ್ಲ, ಗಾಂಧಿ ಜೀವನ ಪದ್ಧತಿಯ ಸಂಕೇತವು ಆಗುವುದಿಲ್ಲ. ಖಾದಿ ರಾಜಕಾರಣಿಗಳ ಸಮವಸ್ತ್ರವಾಗಿರುವಂತೆ ಹಾಗೂ ಯುವ ಪೀಳಿಗೆಯ ಬೆಡಗಿನ ವಸ್ತ್ರವಾಗಿರುವಂತೆ ತೋರುತ್ತದೆ. ಈ ಎರಡು ಬಗೆಯ ಜನರಲ್ಲಿ ಯಾರು ಸ್ವಲ್ಪ ಮಟ್ಟಿಗಾದರು ಗಾಂಧಿವಾದಿಗಳು ಎಂಬುದನ್ನು ತಿಳಿಯುವುದು ಕಷ್ಟ. ಅದ್ದರಿಂದ ಇದು ಕೇವಲ ಬದಲಾವಣೆಯೆ ಅಥವಾ ನಷ್ಟವೆ? ಬಹುಶಃ ನೂಲುಗಾರಿಕೆ ಸಮಯದ ಕಾಣಿಕೆಯಾಗಿತ್ತು. ಆದರೆ ಗಾಂಧಿ ಪ್ರಣಿತ ಕ್ರೀಯಾಶೀಲತೆ ಅನಂತ ಮತ್ತು ಅದು ಎಂದಿಗಿಂತ ಅಗತ್ಯ.

ಮಹಾತ್ಮಗಾಂಧಿಯವರ ಸಾವಿನ ೫೦ ವರ್ಷಗಳ ಅವಧಿಯ ಒಳಗೆ ಗಾಂಧಿ ಪ್ರಣೀತ ರಚನಾತ್ಮಕ ಕಾರ್ಯಕರ್ತರ ಪರಿಚಯವನ್ನು ಕೊಡುವ ಪುಸ್ತಕ ಪ್ರಕಟವಾಗಿತ್ತು. ಅದರಲ್ಲಿ ೭೦೦ ಹೆಸರುಗಳು ಇದ್ದವು ಅದರಲ್ಲಿ ೬೦ ವರ್ಷಕ್ಕಿಂತಲೂ ಕೆಳಗಿನವರು ಕೇವಲ ೯೦ ಜನರು ಇದ್ದರು ಮತ್ತು ೪೦ ವರ್ಷಕ್ಕೂ ಕಡಿಮೆ ಇದ್ದವರು ೫ ಜನ ಮಾತ್ರ. ಈಗ ೧೫ ವರ್ಷಗಳ ನಂತರ ಗಾಂಧಿ ವಿಚಾರದ ಸಂಸ್ಥೆಗಳ ಪಟ್ಟಿ ಮಾಡಿದರೆ, ರಚನಾತ್ಮಕ ಕಾರ್ಯಕರ್ತರ ಪಟ್ಟಿಗಿಂತಲೂ ಚಿಕ್ಕದಾಗಿರಬಹುದು ಎಂಬುದನ್ನು ಊಹಿಸಬಹುದಾಗಿದೆ ಮತ್ತು ಗಾಂಧಿ ವಿಚಾರದ ಅಕಾಡಮಿಗಳ ಪಟ್ಟಿ ಎಷ್ಟು ದಪ್ಪದಾಗಿರಬಹುದು. ಗಾಂಧಿಯ ಸಹವಾಸಕ್ಕೆ ಬಂದಿದ್ದ ಜನರಲ್ಲಿ ಸಾಮಾನ್ಯವಾಗಿ ಎಲ್ಲರು ತೀರಿಕೊಂಡಿದ್ದಾರೆ. ಆದರೆ ಗಾಂಧಿಯ ಮುಂದಿನ ಪೀಳಿಗೆಗಾಗಿ ಅನೇಕ ಯುವಕರು ತೃಣಮೂಲದಲ್ಲಿ ಕೆಲಸ ಮಾಡುತ್ತಿದ್ದಾರೆ. ಈ ಯುವಕರ ಹೆಚ್ಚಾಗಿ ನ್ಯಾಷನಲ್ ಅಲೈನ್ಸ ಆಫ್ ಪೀಪಲ್ ಚಳುವಳಿಯ ಆಶ್ರಯದಲ್ಲಿ ಕೆಲಸ ಮಾಡುತ್ತಿದ್ದಾರೆ. ಇಂದು ಭಾರತದಲ್ಲಿ ಗಾಂಧಿ ಚಳುವಳಿ ಎಂಬುದು ಇಲ್ಲವೇ ಇಲ್ಲಾ ಎಂದು ಹೇಳುವುದು ತಪ್ಪಾಗಲಾರದು. ಇದರ ಅರ್ಥ ಗಾಂಧೀಜಿ ವೇದಿಕೆಯ ಮೇಲಿಂದ ಕಣ್ಮರೆಯಾಗಿದ್ದಾರೆ ಎಂದಲ್ಲ. ಈಗ ಪುನಃ ಯುನಿವರ್ಸಿಟಿಗಳಲ್ಲಿ ಇರುವ ಗಾಂಧಿ ಕೋರ್ಸ್, ಗಾಂಧಿ ಅಧ್ಯಯನ ಕೇಂದ್ರಗಳು, ಮತ್ತು ಗಾಂಧಿ ಪರ ಪತ್ರಿಕೆಗಳು ಗಾಂಧಿ ವಿಚಾರವನ್ನು ಎಷ್ಟರ ಮಟ್ಟಿಗೆ ಜನ ಸಾಮಾನ್ಯರಿಗೆ ತಲುಪಿಸಿವೆ ಎಂಬುದನ್ನು ನೋಡಬೇಕು. ಈಗ ಗಾಂಧಿ ಕಣ್ಮರೆಯಾಗಿದ್ದರೂ ಗಾಂಧಿ ಚಳುವಳಿ ದೇಶದಲ್ಲಿ ಇದೆ ಎಂಬುದು ಗೊತ್ತಾಗುತ್ತದೆ. ಇಷ್ಟರಲ್ಲಿಯೆ ಗಾಂಧಿ ದಕ್ಷಿಣ ಆಫ್ರಿಕಾದಿಂದ ಮಹಾತ್ಮರಾಗಿ ಭಾರತಕ್ಕೆ ಬಂದ ಸಂಗತಿಯ ೧೫೦ನೆ ವಾರ್ಷಿಕೋತ್ಸವವನ್ನು ಆಚರಿಸಲಿದ್ದೇವೆ.

ಇಂತಹ ಸಮಯದಲ್ಲಿ ಗಾಂಧಿ ಪರಂಪರೆ ಮತ್ತು ಅವರ ಅನುಯಾಯಿಗಳನ್ನು ನೋಡಲು ಸುಸಮಯ. ಈ ಕೆಲಸವನ್ನು ತಮ್ಮನ್ನು ಗಾಂಧಿ ಜನ ಎಂದು ಕರೆದುಕೊಳ್ಳುವವರೆಲ್ಲರು ಮಾಡಬೇಕಾದದ್ದು. ನನ್ನಂತಹ ವಿದೇಶಿಯರು ಕೂಡ.

೧೯೮೩ರಲ್ಲಿ ಪಾಲ್ ಕ್ಲೆಮೆಂಟ್ಸ್ ಎಂಬುವವರು ಗಾಂಧಿ ಚಳುವಳಿಯ ಪರಿಶೋಧನೆ ನಡೆಸಿ ಹೀಗೆ ಬರದಿದ್ದಾರೆ:-

ಗಾಂಧಿ ಚಳುವಳಿ ಇಂದಿನ ಆಧುನಿಕ ಕಾಲದಲ್ಲಿ ಅಪ್ರತಿಮವಾದದ್ದು ಏಕೆಂದರೆ ಅದಕ್ಕೆ ದೀರ್ಘಕಾಲದ ಇತಿಹಾಸವಿದೆ ಮತ್ತು ಸಾಂಸ್ಥಿಕ ಬಲವಿದೆ. ಸೃಜನಾತ್ಮಕ ಶಕ್ತಿ ಇದೆ. ಗಾಂಧಿಯ ಹತ್ಯೆಯಾಗಿ ೭೫ವರ್ಷಗಳ ತರುವಾಯ ಗಾಂಧಿ ಸಿದ್ಧಾಂತ ಒಪ್ಪಿದವರನ್ನು ಆಕರ್ಷಿಸುತ್ತಲೆ ಇದೆ. ಅದು ಸ್ವತಂತ್ರ ಭಾರತದೊಂದಿಗೆ ಬೆಳೆದು ಬಂದಿದೆ ಮತ್ತು ಭಾರತ ಪ್ರಚಲಿತ ವಿಚಾರಗಳ ಅನುಗುಣವಾಗಿ ಬೆಳಯಬೇಕೆಂಬ ವಿಚಾರಕ್ಕೆ ಬಹುಮುಖ್ಯವಾದ ಪರ್ಯಾಯವನ್ನು ಒದಗಿಸುತ್ತದೆ.

೧೫ ವರ್ಷಗಳ ಹಿಂದೆ ಅಂದರೆ ಕ್ಲೇಮಂಟ್ಸರ ಆಶಾದಾಯಕ ಮಾತುಗಳು ಗಾಂಧಿಯ ಹತ್ಯೆಯ ೫೦ ವರ್ಷಗಳ ನಂತರ ಇಲ್ಲವೆಂದು ನಾನು ಬರೆದೆ. ಆಗ ನಾನು ಗಮನಿಸಿದ್ದು ಏನೆಂದರೆ ೧೯೭೦ ರಾಜಕೀಯ ಬೆಳವಣಿಗೆಯ ನಂತರ ಜೆ.ಪಿ ಯವರ ಚಳುವಳಿ ದೇಶದಲ್ಲಿದ್ದ ಯಾರು ತಮ್ಮನ್ನು ಸಕ್ರೀಯ ಗಾಂಧಿವಾದಿಗಳೆಂದು ಕರೆದುಕೊಳ್ಳುತ್ತಿದ್ದರೂ ಅಂಥವರೆಲ್ಲರ ಶಕ್ತಿಯನ್ನು ತೆಗೆದುಕೊಂಡಿತ್ತು. ಅವರೆಲ್ಲರೂ ಧೀರ್ಘಾವದಿಯ ಗ್ರಾಮೀಣಾಭಿವೃದ್ಧಿ ಕೆಲಸದಲ್ಲಿ ತೊಡಗಿಕೊಂಡರು. ಭೂದಾನ/ ಗ್ರಾಮದಾನ ಚಳುವಳಿಯ ನಂತರ ಹಾಗೂ ಜೆ.ಪಿ ಯವರ ಸಂಪೂರ್ಣ ಕ್ರಾಂತಿಯ ನಂತರ ಗಾಂಧಿ ಚಳುವಳಿಯಲ್ಲಿ ಒಡಕು ಉಂಟಾದ್ದರಿಂದ ಹೀಗಾಯಿತು. ನಾನು ಭಾರತಕ್ಕೆ ಬಂದು ಬರೆಯಲು ಪ್ರಾರಂಭಿಸಿದಾಗ ಇದು ಗಾಂಧಿ ಚಳುವಳಿಯೆ ಅಥವಾ ಯಾವುದಾದರು ಚಳುವಳಿಯೆ? ಎಂದು ಕೇಳಿದೆ. ಜೆ.ಪಿಯಿಂದ ಪ್ರಭಾವಿತರಾದ ಅನೇಕ ಗಾಂಧಿ ಜನರಿಗೆ ವಯಸ್ಸಾಗಿರುವುದರಿಂದ ಮತ್ತು ಗಾಂಧಿ ಸಿದ್ಧಾಂತ ಭಾರತದಲ್ಲಿ ಬಹಳ ಭಿನ್ನವಾದ ದಿಕ್ಕಿನಲ್ಲಿ ಸಾಗಲು ಕಾರಣವಾಗಿರಬಹುದು. ಗಾಂಧಿವಾದಿಗಳ ಕಣ್ಮರೆ ಅರ್ಥ ಗಾಂಧಿ ಎಲ್ಲಾ ಕ್ಷೇತ್ರಗಳಲ್ಲಿ ಅಪ್ರಸ್ತುತ ಎಂದೇನಲ್ಲ. ಎಲ್ಲಿ ಯಾವ ಕೆಲಸದಲ್ಲಿ ಗಾಂಧಿಯನ್ನು ಸೇರಿಸಿಕೊಳ್ಳಬಹುದೊ ಅ ಕೆಲಸದಿಂದಾಗಿ ಅವರು ಅತಿ ಪ್ರಸ್ತುತವಾಗುತ್ತಾರೆ ಬಹು ಮುಖ್ಯ ಉದಾಹರಣೆ ಎಂದರೆ ರಾಜಕಾರಣದಲ್ಲಿ ಅವರ ವಿಚಾರವನ್ನು ಅಳವಡಿಸಿಕೊಳ್ಳವುದು ಸರಿ. ಸುಮಾರು ೨೦ ವರ್ಷಗಳ ಹಿಂದೆ ಹಿರಿಯ ಗಾಂಧಿವಾದಿ ಮನಮೋಹನ ಚೌಧರಿ ಹೇಳುತ್ತಿದ್ದದಂತೆ ಭಾರತದಲ್ಲಿ ಅನೇಕ ಜನ ಯುವಕರು ಕಾಂಗ್ರೆಸ್ ಸರಕಾರವೆಂದರೆ ಗಾಂಧೀ ಪಾರ್ಟಿಯ ಸರಕಾರವೆಂದು ಬಗೆಯುತ್ತಿದ್ದರು. ಇದರಿಂದಾಗಿ ಯುವಜನತೆಯ ಮನದಲ್ಲಿ ರಾಜಕಾರಣ ಭ್ರಷ್ಟಾಚಾರದಿಂದ ಕೂಡಿದೆ ಎಂದು ಅನಿಸಿ ಮಹಾತ್ಮ ಗಾಂಧಿ ಬಗ್ಗೆ ಅಗೌರವ ಆಯಿತು. ಮತ್ತು ಗಾಂಧಿ ಚಳುವಳಿಗೆ ಹಾಗೂ ತತ್ವಶಾಸ್ತ್ರಕ್ಕೆ ಕೆಟ್ಟ ಹೆಸರು ತಂದಿತು. "ಇಂದು ಗಾಂಧಿ ಎಂದರೆ ಕೆಲಸಕ್ಕೆ ಬಾರದ ಮುತ್ತಜ್ಜ, ಮಕ್ಕಳನ್ನು ಸುಮ್ಮನೆ ಇರಲು ಗದರಿಸುವ ಮೂಲಕ ತಮ್ಮ ಹಿರಿಯರನ್ನು ಪ್ರಶ್ನೆ ಮಾಡಬಾರದೆಂದು ಹೇಳುವ ಮನುಷ್ಯ, ಮತ್ತು ಅಧಿಕಾರದಲ್ಲಿರುವ ಜನರ ಬಗ್ಗೆ

ಗೌರವ ಇಡಬೇಕು ಇತ್ಯಾದಿಯಾಗಿ ಎಂದೆಲ್ಲಾ ಹೇಳುವ ಮುದಕನೆಂಬತೆ ಇಂದಿನ ಯುವ ಜನತೆಯ ಮುಂದೆ ಗಾಂಧಿಯನ್ನು ಬಿಂಬಿಸಲಾಗಿದೆ. ರಾಷ್ಟ್ರ ಪಿತನೆಂದು ಗೌರವಿಸಿ ಆತನನ್ನು ಭಾರತ ಕೇಂದ್ರ ಸರಕಾರದ ಕೃಪಾ ಪೋಷಿತ ಸಂತನನ್ನಾಗಿ ಮಾಡಲಾಗಿದೆ. ಯಾರು ಗಾಂಧಿಯವರ ವಿಚಾರಗಳಿಗೆ ಮತ್ತು ತತ್ವಗಳಿಗೆ ಬೆಲೆ ಕೊಡುವುದಿಲ್ಲವೊ. ಅಂತಹವರು ಚುನಾವಣೆ ಗೆಲ್ಲುವುದಕ್ಕಾಗಿ ಗಾಂಧಿಯನ್ನು ಉಪಯೋಗಿಸಿಕೊಳ್ಳುತ್ತಾರೆ. ಮನಮೋಹನ ಚೌಧರಿಯವರ ಈ ಹೇಳಿಕೆ ಎಲ್ಲರಲ್ಲೂ ಆಸಕ್ತಿ ಮೂಡಿಸಿದ ಹೇಳಿಕೆಯಾಗಿತ್ತು. ಆದರೆ ಇಂದು ಗಾಂಧಿಯವರನ್ನು ಕುರಿತು ಎಷ್ಟು ಯುವಕರು ಆಲೋಚಿಸುತ್ತಾರೆ ಎಂದು ಯೋಚನೆ ಮಾಡಬೇಕಾಗಿದೆ. ಇತ್ತೀಚೆಗೆ ಕೆಲ ದಿನಗಳ ಹಿಂದೆ ಅಮೇರಿಕಾದ ಲೇಖಕ ಲೇಲಿ ವಿಲ್ಡ್ ಎಂಬುವವರು ಗಾಂಧಿಜಿಯವರ ಜೀವನ ಚರಿತ್ರೆಯನ್ನು ಪ್ರಕಟಿಸಿದಾಗ ಕೆಲವು ರಾಜಕಾರಣಿಗಳು ಸಾತ್ವಿಕ ಕೋಪವನ್ನು ಪ್ರಕಟಿಸಿದರು. ಅವರು ಆ ಪುಸ್ತಕವನ್ನು ಓದಿರಲೇ ಇಲ್ಲ. ಆದರೆ ಅಲ್ಲ ಸಲ್ಲದ ಗಾಳಿ ಸುದ್ದಿಯೆ ಅವರಿಗೆ ತಮ್ಮ ಸ್ವಲಾಭಕ್ಕಾಗಿ ಗಾಂಧಿಯನ್ನು ಉಪಯೋಗಿಸಿಕೊಳ್ಳಲು ಸಾಕಾಗಿತ್ತು.

ಕಳೆದು ಹೋದ ೧೯೮೦ ದಶಕಗಳಲ್ಲಿ ಅಮೇರಿಕಾದ ಪ್ರಜೆಯಾಗಿರುವ ಭಾರತದ ತತ್ವಜ್ಞಾನಿ ಈಶ್ವರ ಹ್ಯಾರಿಸ್ ಭಾರತದಲ್ಲಿ ಸದ್ಯದ ಸ್ಥಿತಿಯಲ್ಲಿ ಗಾಂಧಿ ಚಳುವಳಿಯನ್ನು ಕುರಿತು "ಗಂಡಾಂತರದಲ್ಲಿ ಸರ್ವೋದಯ" ಎಂಬ ಹೆಸರಿನಲ್ಲಿ ಬರೆದರು. ತಮ್ಮ ವಿಶ್ಲೇಷಣೆಯಲ್ಲಿ ಒಂದು ಕಾಲಕ್ಕೆ ಧ್ರುವತಾರೆ ಎಂದು ಬಣ್ಣಿಸಲಾಗಿದ್ದ ಅದು ಈಗ ಕೇವಲ ಸ್ವಯಂ ಸೇವಾ ಏಜನ್ಸಿ, ಹಾಗೆ ಆಗಿ ಬಿಟ್ಟಿದೆ ಎಂದು ಹೇಳಿದ್ದಾರೆ. ಆ ಆಂದೋಲನದ ಹಿರಿಯ ನಾಯಕರು ವೃದ್ಧರಾಗುತ್ತಿದ್ದಾರೆ ಅದ್ದರಿಂದ ಭಾರತದಲ್ಲಿ ಗಾಂಧಿ ವಿಚಾರ ಸೋತಿದೆ ಎಂದು ಅವರು ತಿರ್ಮಾನಕ್ಕೆ ಬಂದಿದ್ದಾರೆ ಮತ್ತು ಉದಾಸೀನಕ್ಕೆ ಒಳಗಾಗುವ ಸನ್ನಿವೇಶ ಬಂದಿದೆ ಎಂದು ಹೇಳಿದ್ದಾರೆ. ಬಾಬ್ರಿ ಮಸೀದಿಯ ಮೇಲಿನ ದಾಳಿಯ ಸಮಯದಲ್ಲಿಯೂ ಕೂಡಾ ಅಯೋಧ್ಯೆಯಲ್ಲಿ ಗಾಂಧಿ ವಿಚಾರದ ಸಮೂಹಗಳು ತಮ್ಮ ತಮ್ಮ ಪ್ರಯತ್ನಗಳನ್ನು ಯಾವುದೆ ಗಂಭೀರ ರೂಪದಲ್ಲಿ ಸಮನ್ವಯ ಗೋಳಿಸಲಾರದೆ ಹೋದವು. ಇದರ ಅರ್ಥ ಹ್ಯಾರಿಸ್ ಎಲ್ಲಾ ಅರ್ಥದಲ್ಲಿ ಸರಿಯೆಂದು ಹೇಳಲಾಗುವುದಿಲ್ಲ. ಗಾಂಧಿ ಚಳುವಳಿ ಖಂಡಿತವಾಗಿಯೂ ಅವರ ಬರೆದ ಕಾಲದ ನಂತರ ಮಾಸಿ ಹೋಗಿದೆ. ೧೯೫೦ರ ದಶಕಗಳಲ್ಲಿ ಇದ್ದಂತಹ ಆಶಾ ಭಾವನೆಯಾಗಲಿ, ಅಣ್ಣಾ ಹಜಾರೆಯವರ ಬಗ್ಗೆ ಇದ್ದಂತಹ ಆಶಾಭಾವನೆಯಾಗಲಿ ಅಂತರವನ್ನು ತುಂಬಲಾರದೆ ಹೋದವು. ಇದರ ಅರ್ಥ ಗಾಂಧಿ ಭಾರತದಲ್ಲಿ ಸೋತಿದ್ದಾರೆಂದಾಗಲಿ, ಉದಾಸೀನತೆಯ ಅಂಚಿನಲ್ಲಿ ಇದ್ದಾರೆ ಎಂದಾಗಲಿ ಅಲ್ಲ. ಗಾಂಧಿ ಈಗ ಎಂದಿನಂತೆ ಎಲ್ಲೆಡೆಯೂ ಇದ್ದಾರೆ ಆದರೆ ಕಾರ್ಯಕ್ಷೇತ್ರದಿಂದ ಶೈಕ್ಷಣಿಕ ಕ್ಷೇತ್ರಕ್ಕೆ ಕೊಂಚ ಹಂತದವರೆಗೆ ವಾಲಿದ್ದಾರೆ.

ಗಾಂಧಿ ಶೋಧನೆಯ ಕೆಲಸವನ್ನು ನಾನು ಭಾರತದಲ್ಲಿ ಪ್ರಾರಂಭಿಸಿದಾಗ ಕೆಲವು ಸ್ಥಾನಿಯ ಗಾಂಧಿ ವಿಚಾರದ ಪಾಂಡಿತ್ಯ ಪೂರ್ಣ ಪತ್ರಿಕೆಗಳಿದ್ದವು ಗಾಂಧಿ ಮಾರ್ಗವು ಇತ್ತು ನಾನು ಈಗಾಗಲೆ ಹೇಳಿದ ಅಮೇರಿಕಾದ ಮತ್ತು ಜೆ.ಐ.ಟಿ.ಎ.ಎಮ್ ಪತ್ರಿಕೆಗಳು ಕೇವಲ ಕೆಲವು ಮುಖ್ಯ ಪತ್ರಿಕೆಗಳ ಪ್ರತಿಲಿಪಿಗಳಾಗಿದ್ದವು.

ಅಹಿಂಸಾ, ನಾನ್ ವಯಲೆನ್ಸ್, ಅನಾಸಕ್ತಿ ದರ್ಶನ, ಜರನಲ್ ಆಫ್ ಗಾಂಧಿ ಸ್ಮೃತಿ ಮತ್ತು ದರ್ಶನ ಸಮಿತಿ, ಗಾಂಧಿಯನ್ ಸ್ಟಡೀಸ್, ಗಾಂಧಿಯನ್ಸ್ ಇನ್ ಆಕ್ಷ್ಯನ್, ಸರ್ವೋದಯ, ಸಂಸ್ಥಾಕುಲ, ಜರನಲ್ ಆಫ್ ಫೀಸ್ ಆಂಡ್ ಗಾಂಧಿಯನ್ ಸ್ಟಡೀಸ್ ಗಾಂಧಿಯನ್ ಫರಸಪ್ಪೀಯಿಸ್, ಗಾಂಧಿ ಜ್ಯೋತಿ, ಜರನಲ್ ಆಫ್ ದ ಮಿಡಿಯಾ ಸೆಂಟರ್. ಅವುಗಳ ತಾಳುವಿಕೆ, ಮತ್ತು ಅವುಗಳ ಅಗತ್ಯತೆ ಬಗ್ಗೆ ಯೋಚಿಸಬೇಕಾಗುತ್ತದೆ. ನಿಜ ಹೇಳಬೇಕೆಂದರೆ ಸಾಕಷ್ಟು ಪ್ರಮಾಣದ ಗುಣಮಟ್ಟದ ಸಂಶೋಧನೆಯಾಗಲಿ ಬರಹವಾಗಲಿ ಇಷ್ಟೆಲ್ಲಾ ಪತ್ರಿಕೆಗಳ ಅಗತ್ಯವನ್ನು ಸಮರ್ಥಿಸುವುದಿಲ್ಲ, ಅನೇಕ ಸಲ ಅವು ೨ನೇ ದರ್ಜೆಯದಾಗಿರುತ್ತದೆ. ಮತ್ತು ಬಹಳ ಕಾಲ ತಾಳುವುದಿಲ್ಲ. ಭಾರತದಲ್ಲಿರುವ ಗಾಂಧಿ ಸಿದ್ಧಾಂತದ ಪಂಡಿತರು ತಮ್ಮ ಪ್ರಯತ್ನಗಳನ್ನು ಗಾಂಧಿ ಮಾರ್ಗದಂತಹ ಪತ್ರಿಕೆ ಜಾಗತಿಕ ಮಟ್ಟದಲ್ಲಿ ಶ್ರೇಷ್ಠವಾಗುವಂತೆ ಏಕೆ ಮಾಡುತ್ತಿಲ್ಲ. ಎಂಬ ಬಗ್ಗೆ ನನಗೆ ಆಶ್ಚರ್ಯವಾಗುತ್ತದೆ. ಇಂತಹ ಶ್ರೇಷ್ಠ ಮಟ್ಟದ ಪತ್ರಿಕೆಯೊಂದನ್ನು ಪ್ರಕಟಿಸುವ ಯೋಚನೆ ಬೇರೆ ದೇಶಗಳಲ್ಲಿ ಈಗಾಗಲೆ ನಡೆಯುತ್ತಿದೆ ಅಂತಹ ಒಂದು ಪತ್ರಿಕೆಯ ಪ್ರಕಟಿಸುವ ಭಾರತದ ಅವಕಾಶ ತಪ್ಪುವ ಮೊದಲು ಅವರು ಜಾಗೃತರಾಗಬೇಕು.

ನಾನು ಭಾರತಕ್ಕೆ ಮೊದಲ ಸಲ ಬಂದಾಗ ಭಾರತದ ವಿಶ್ವವಿದ್ಯಾಲಯಗಳಲ್ಲಿ ಕೇವಲ ಕೆಲವು ಗಾಂಧಿ ಕೋರ್ಸ್‌ಗಳಿದ್ದವು. ಇಂಗ್ಲೀಷ್ ಭಾಷೆಯ ಮೂಲಕ ಇರಲೇ ಇಲ್ಲ. ಗಾಂಧಿ ಸಂಶೋಧನಾ ಕೇಂದ್ರಗಳು ಕೂಡಾ ಕಾಣಸಿಗಲಿಲ್ಲ. ಇದಕ್ಕೆ ಅಪವಾದವಾಗಿ ವಾರಣಾಸಿಯ ರಾಜ್‌ಘಾಟನಲ್ಲಿ ಕೆಲವೊಂದು ಕೇಂದ್ರಗಳು ಕಂಡು ಬಂದವು. ಅದೇ ರೀತಿ ದಿಲ್ಲಿಯಲ್ಲಿ ಗಾಂಧಿ ಪೀಸ್ ಫೌಂಡೆಶನ್ ಕಂಡು ಬಂದಿತ್ತು. ಈಗಾಗಲೆ ನಾನು ಹೇಳಿದಂತೆ ತುಂಬಾ ಇತ್ತೀಚಿಗೆ ಗಾಂಧಿ ವಿಚಾರ ಸಂಬಂಧವಾದ ಪತ್ರಿಕೆಗಳು ಪ್ರಕಟವಾಗಿವೆ ಮತ್ತು ನಿಂತುಹೋಗಿವೆ. ಆದಾಗ್ಯೂ ಇನ್ನೊಂದು ದೊಡ್ಡ ಗಾಂಧಿ ಸಂಶೋಧನಾ ಸಂಸ್ಥೆ ಪ್ರಾರಂಭವಾಗಿದೆ. ಮತ್ತು ಗಾಂಧಿ ವಿಷಯಕ್ಕೆ ಸಂಬಂಧಿಸಿದ ಕೋರ್ಸ್‌ಗಳು ಯುನಿವರ್ಸಿಟಿಗಳಲ್ಲಿ ಪ್ರಾರಂಭವಾಗಿವೆ.

ಉದಾ- ಇಂದಿರಾಗಾಂಧಿ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ಗಾಂಧಿ ಕೋರ್ಸ್‌ಗಳು ಪ್ರಾರಂಭವಾಗಿವೆ. ಈ ಎಲ್ಲಾ ಪ್ರಯತ್ನಗಳು ತಾಳಿ ಬಾಳುವಷ್ಟು ಆಸಕ್ತಿ ನಿಜವಾಗಿಯೂ ಇದೆಯೆ? ಶ್ರೇಷ್ಠ ಮಟ್ಟದ ಜಾಗತಿಕ ಕೇಂದ್ರಗಳು ಮತ್ತು ಪತ್ರಿಕೆಗಳು ಬೆಳೆಯುವಂತೆ ಪರಸ್ಪರ ಸಹಕರಿಸುತ್ತಿವೆಯೆ? ಏಕೆಂದರೆ ನನ್ನ ಬಳಿ ಅಂಕಿ-ಸಂಖ್ಯೆಗಳಲ್ಲಿ ಎಷ್ಟೊಂದು ಪತ್ರಿಕೆಗಳು ಗಾಂಧಿ ವಿಚಾರವನ್ನು ಕುರಿತು ಪ್ರಕಟವಾಗುತ್ತವೆ, ವಿಶ್ವವಿದ್ಯಾನಿಲಯದ ಮಟ್ಟದಲ್ಲಿ ಗಾಂಧಿ ಕೋರ್ಸ್‌ಗಳು ಇವೆ ಮತ್ತು ಎಷ್ಟು ಗಾಂಧಿ ಸಂಶೋಧನಾ ಕೇಂದ್ರಗಳಿವೆ ಎಂಬುದರ ಬಗ್ಗೆ ನಿಖರ ಮಾಹಿತಿ ಇಲ್ಲ. ಇಷ್ಟೊಂದು ಗಾಂಧಿ ವಿಚಾರದ ಸಂಸ್ಥೆಗಳು ಏಕೆ ಇವೆ ಎಂಬ ಬಗ್ಗೆ ನನಗೆ ಆಶ್ಚರ್ಯವಾಗುತ್ತದೆ. ನನ್ನ ಆಶಾದಾಯಕ ಕಲ್ಪನೆಯ ಪ್ರಕಾರ ಈ ರೀತಿ ದೊಡ್ಡ ಸಂಖ್ಯೆಯ ಕಾರಣ ಯುವ ಜನತೆಯಲ್ಲಿ ಉಂಟಾಗಿರುವ ಗಾಂಧಿ ವಿಚಾರದ ಬಗೆಗಿನ ಹಸಿವು ಯುವಕರಲ್ಲಿ ಗಾಂಧಿಯ ಬಗ್ಗೆ ಇಷ್ಟೊಂದು ಹಸಿವುಂಟಾಗಲು ಲಗೆ ರಹೋ ಮುನ್ನಾ ಭಾಯಿ ಎಂಬಂತಹ ಚಲನ ಚಿತ್ರದಿಂದಾಗಿ. ಆ ಚಲನಚಿತ್ರ ತಿಳಿಸುವ ಮಾಹಿತಿಗಿಂತಲೂ

ಮುಂದಿನ ಜ್ಞಾನವನ್ನು ಪಡೆಯಬೇಕೆಂಬ ಕುತೂಹಲವಾಗಿರಬಹುದು. ಅದಕ್ಕಾಗಿ ಯುವಕರು ಪ್ರಾದೇಶಿಕ ಗಾಂಧಿ ಸಂಸ್ಥೆಗಳತ್ತ ಆರ್ಕಷಿತರಾಗಿ ಧಾವಿಸುತ್ತಿರಬಹುದು ಮತ್ತು ಗಾಂಧಿ ಸಾಹಿತ್ಯ ಪತ್ರಿಕೆಗಳನ್ನು ಓದುತ್ತಿರಬಹುದು. ಆದರೆ ಈ ಮಾತಿನ ಬಗ್ಗೆ ನಿಖರವಾದ ಸಾಕ್ಷ್ಯಾಧಾರಗಳು ಇದ್ದಲ್ಲಿ ಒಳ್ಳೆಯದು.

ಗಾಂಧಿಯವರು ಶಿಕ್ಷಣದ ಬಗ್ಗೆ ಬಹಳಷ್ಟು ಚಿಂತಿತರಾಗಿದ್ದರು ಅದಕ್ಕಾಗಿ ಸಾಮಾಜಿಕ ಮತ್ತು ಸಾಂಸ್ಕೃತಿಕ ವಿಷಯಗಳನ್ನೊಳಗೊಂಡ ಕಾರ್ಯ ಪ್ರಧಾನವಾದ ಶೈಕ್ಷಣಿಕ ಯೋಜನೆಯೊಂದನ್ನು ಅವರು ಶಿಫಾರಸ್ಸು ಮಾಡುತ್ತಿದ್ದರು. ಅದು ಆಹಾರ ಮತ್ತು ಬಟ್ಟೆಯಂತಹ ಮಾನವ ಕುಲದ ಅಗತ್ಯತೆಗಳನ್ನು ಪೂರೈಸಿಕೊಳ್ಳುವುದಾಗಿತ್ತು. ಈ ಕೆಲಸವನ್ನು ಶಾಲಾ ಮಕ್ಕಳು ಮತ್ತು ವಯಸ್ಕರರು ಕೈಗೊಳ್ಳಬೇಕಾಗಿತ್ತು. ಗಾಂಧಿಯವರ ಈ ಶೈಕ್ಷಣಿಕ ವಿಚಾರ ನಗರಾಭಿಮುಖವಾಗಿರುವ ವಿಶ್ವವಿದ್ಯಾನಿಲಯಗಳ ಹಂತದಲ್ಲಿ ಅವ್ಯಹಾರಿಕವಾಗಿರಬಹುದು. ಗ್ರಾಮೀಣ ವಿದ್ಯಾರ್ಥಿಗಳ ರೀತಿಯಲ್ಲಿ ಆಹಾರ ಸ್ವಾವಲಂಬನೆಯ ಕುಶಲತೆಯನ್ನು ನಗರ ವಿದ್ಯಾರ್ಥಿಗಳು ಹೊಂದಿರಬೇಕೆಂದು ನೀರಿಕ್ಷಿಸುವುದು ಸಾಧುವೆನಿಸಿಲಿಕ್ಕಿಲ್ಲ. ಇದು ೨೧ನೇ ಶತಮಾನದಲ್ಲಿ ವಿಶ್ವವಿದ್ಯಾನಿಲಯದ ಅಧ್ಯಯನ ವ್ಯವಸ್ಥೆಯಲ್ಲಿ ಶ್ರಮಾಧಾರಿತ ಕೆಲಸಮಾಡುವುದು ಅನುಚಿತವೆನಿಸಬಹುದು. ಇಲ್ಲಿ ಗಾಂಧಿ ವಿಚಾರ ಸಂಬಂಧಿತ ಕೋರ್ಸ್‌ಗಳು ಪೂರ್ಣತಃ ಶೈಕ್ಷಣಿಕವಾಗಿವೆ. ಮತ್ತು ಎಷ್ಟು ಕೋರ್ಸ್‌ಗಳು ಸಮುದಾಯ ಮುಖಿ ಆಗಿವೆ ಎಂಬುದನ್ನು ತಿಳಿಯುವುದು ಆಸಕ್ತಿದಾಯಕ ವಿಷಯವಾಗಿದೆ. ಸಮುದಾಯ ಮುಖಿ ಶೈಕ್ಷಣಿಕ ಕಾರ್ಯಕ್ರಮಗಳು ತಮಿಳುನಾಡಿನ ಗಾಂಧಿ ಗ್ರಾಮ ಗ್ರಾಮೀಣ ವಿಶ್ವವಿದ್ಯಾನಿಲಯದಲ್ಲಿ ಇದೆ. ಅಲ್ಲಿ ವಿದ್ಯಾರ್ಥಿಗಳು ಶಾಂತಿ ಸೇನೆಯಲ್ಲಿ ಭಾಗವಹಿಸುವುದು ಪಠ್ಯಕ್ರಮದಲ್ಲಿಯ ಅಳವಡಿಸಿಕೊಳ್ಳಲಾಗಿದೆ. ಆ ಕೋರ್ಸಿನಲ್ಲಿ ಬಹಳಷ್ಟು ವ್ಯವಹಾರಿಕ ಶೈಕ್ಷಣಿಕ ಬೋಧನೆಗಳಿವೆ. ಇದೆ ರೀತಿ ಗಾಂಧಿ ಸ್ಥಾಪಿತ ಗುಜರಾತ ವಿದ್ಯಾಪೀಠದಲ್ಲಿ ಗಾಂಧಿ ಕೋರ್ಸು ಬಹಳಷ್ಟು ವ್ಯವಹಾರಿಕ ಅಂಶವನ್ನು ಹೊಂದಿದೆ. ಸಮುದಾಯ ಆಧಾರಿತ ಕೆಲಸ ಮಾಡಿದ ವಿದ್ಯಾರ್ಥಿಗಳಿಗೂ ಸಮುದಾಯ ರಹಿತ ಕೋರ್ಸಗಳನ್ನು ಪೂರೈಯಿಸಿದ ವಿದ್ಯಾರ್ಥಿಗಳಲ್ಲಿ ಕಂಡು ಬರುವ ವ್ಯತ್ಯಾಸವೇನೆಂಬುದನ್ನು ತಿಳಿಯುವುದೆ ಆಸಕ್ತಿದಾಯಕವಾಗಿದೆ.

ಅನೇಕ ಗಾಂಧಿ ಕೋರ್ಸಗಳ ಬಗ್ಗೆ ಕೇಳಬಹುದಾದಂತಹ ಇತರ ಪ್ರಶ್ನೆಗಳು ಇವೆ. ನಾನು ನೋಡಿದ ಗಾಂಧಿ ಕೋರ್ಸಗಳು ಮತ್ತು ಇತರ ಕೋರ್ಸಗಳು ಉದಾತ್ತವಾದ ಉದ್ದೇಶಗಳನ್ನು ಹೊಂದಿವೆ, ಅಂತೆಯೇ ಕಲಿಕೆಯ ಉದ್ದೇಶವು ಇದೆ. ಆದರೆ ವಾಸ್ತವದಲ್ಲಿ ಆ ಉದ್ದೇಶಗಳು ನೇರವೆರುತ್ತಿವೆಯೆ?. ಒಂದುವೇಳೆ ಯಾರು ಈ ಕೋರ್ಸಗಳನ್ನು ಮಾಡುತ್ತಾರೆ ಮತ್ತು ಏಕೆ ಮತ್ತು ಅದರ ಫಲಶೃತಿ ಏನು ಎಂಬ ಬಗ್ಗೆ ಯಾವುದಾದರು ಸಂಶೋಧಕ ಪ್ರಬಂಧ ದೊರೆತರೆ ಆಶ್ಚರ್ಯದಾಯಕ ಸಂತೋಷವಾಗುತ್ತದೆ. ಈ ಕೋರ್ಸಗಳಿಗೆ ಯಾರು ಸೇರುತ್ತಾರೆ? ಅವರು ಗಾಂಧಿಯಲ್ಲಿ ನೈಜವಾದ ಆಸಕ್ತಿ ಉಳ್ಳವರೆ, ಅಥವಾ ಯುವ ಕ್ರೀಯಾಶೀಲರೆ ಅಥವಾ ಭಾವಿಕ್ರೀಯಾಶೀಲರೆ? ಅವರು ಮಾಡುವ ಕೃತಿಗಳಿಗೆ ಒಂದು ಸಿದ್ಧಾಂತವನ್ನು ಹುಡುಕುತ್ತಿರಬಹುದೇ? ಹಾಗಿಲ್ಲದೆ ಹೋಗಿದ್ದರೆ ವಿದ್ಯಾರ್ಥಿಗಳು

ಈ ಕೋರ್ಸ್‌ಗಳನ್ನು ಏಕೆ ಮಾಡುತ್ತಿದ್ದರು? ನೌಕರಿ ಪಡೆಯಲೊ ಅಥವಾ ಉನ್ನತಿ ಪಡೆಯುದಕ್ಕಾಗಿಯೊ? ವಿದ್ಯಾರ್ಥಿಗಳ ಕೋರ್ಸ್‌ಗಳನ್ನು ಮುಗಿಸಿದ್ದರಿಂದ ಹೆಚ್ಚು ಕ್ರೀಯಾಶೀಲರಾಗಿದ್ದಾರೆಯೆ? ಒಂದು ವೇಳೆ ಹಾಗಿಲ್ಲದ್ದಿದ್ದರೆ, ಏಕೆ ಇಲ್ಲಾ ಅವರಿಗೆ ಏನಾಯಿತು? ಗಾಂಧಿ ಕೋರ್ಸ್‌ಗಳು ಹಿಂದುಯೇತರ ವಿದ್ಯಾರ್ಥಿಗಳನ್ನು ಆಕರ್ಷಿಸುತ್ತವೆಯೆ? ಏಕೆ ವಿದೇಶಿ ಹುಡುಗರು ಹೆಚ್ಚಾಗಿ ಮಹಾತ್ಮರ ದೇಶವಾದ ಭಾರತಕ್ಕೆ ಈ ಕೋರ್ಸ್‌ಗಳ ಮೂಲಕ ಗಾಂಧಿಯನ್ನು ತಿಳಿಯಲು ಬರುತ್ತಿಲ್ಲ? ಈ ಕೋರ್ಸ್‌ಗಳನ್ನು ಯಾರು ಕಲಿಸುತ್ತಾರೆ, ಅವರ ಶೈಕ್ಷಣಿಕ ಮಟ್ಟವೇನು, ಈ ಅಧ್ಯಾಪಕರಿಗೆ ಏನಾದರು ಕ್ಷೇತ್ರೀಯ ಅನುಭವ ಇದೆಯೆ, ಕೋರ್ಸ್‌ಗಳ ಸಿಲಬಸ್ ಎಂತಹದು ಮತ್ತು ಆ ಕೋರ್ಸಗಳು ಚೆತೋಹಾರಿಯಾಗಿರುತ್ತವೆಯೆ ಮತ್ತು ವರ್ತಮಾನಕ್ಕೆ ಪ್ರಸ್ತುತವಾಗುವಂತೆ ಮಾಡಲಾಗಿದೆಯ ಎಂಬುದಕ್ಕೆ ಯಾವ ಖಚಿತತೆ ಇದೆ.

ತುಂಬಾ ಇತ್ತಿಚೇಗೆ ಇನ್ನೊಂದು ಆಶ್ಚರ್ಯ ನನಗಾಗಿ ಕಾದಿತ್ತು. ಸಿಮ್ಲಾದಲ್ಲಿ ಇರುವ ಇನ್ಸಿಟ್ಯೂಟ್ ಫಾರ್ ಎಡ್ವಾನ್ಸಡ್ ಸ್ಟಡೀಸ್ ನಲ್ಲಿ ನಡೆದ ಒಂದು ಸೆಮೀನಾರನಲ್ಲಿ ನಾನು ತೊಡಗಿಸಿಕೊಂಡಿದ್ದೆ. ಅಲ್ಲಿ ಅನೇಕ ಬಹಳ ಕುಶಾಗ್ರಮತಿಯ ವಿದ್ಯಾರ್ಥಿಗಳು ಇದ್ದರು ಅವರು ಶಾಂತಿ ವಿಷಯಕ್ಕೆ ಸಂಬಂದಿಸಿದ ಕೋರ್ಸಗಳ ಅಧ್ಯಯನವನ್ನು ಭಾರತದ ಅತ್ತುತ್ತಮ ವಿಶ್ವವಿದ್ಯಾಲಯಗಳಲ್ಲಿ ಮಾಡುತ್ತಿದ್ದರು. ಅವರು ಪಾಶ್ಚಿಮಾತ್ಯ ದೇಶದ ಪ್ರಮುಖ ಶಾಂತಿ ಪ್ರತಿಪಾದಕರ ಬಗ್ಗೆ ಮತ್ತು ಸಂಘರ್ಷಣೆಗಳ ನಿವಾರಣಾ ವಾದಿಗಳ ಬಗ್ಗೆ ಕೇಳಿದ್ದರು ಮತ್ತು ಜಾನ್ ಗಲ್ಟನ್ ಮತ್ತು ಜಾನ್ ಪಾಲ್ ಲೇಡಾರಚ್ ಇವರ ಬರಹಗಳನ್ನು ಚೆನ್ನಾಗಿ ಓದಿದವರು ಆಗಿದ್ದರು, ಆದರೆ ಅವರಿಗೆ ವಿನೋಬಾ ಅವರ ಬಗ್ಗೆ ಯಾಗಲಿ ಹಾಗೂ ಜೆ.ಪಿ ಯವರ ಶಾಂತಿ ಸೇನೆಯ ಬಗ್ಗೆ ಯಾಗಲಿ ಏನೂ ಗೋತ್ತಿರಲಿಲ್ಲ. ವಿನೋಬಾ ಮತ್ತು ಶಾಂತಿ ಸೇನೆ ೧೯೬೦ ರ ಹಾಗೂ ೧೯೭೦ರ ದಶಕಗಳಲ್ಲಿ ಭಾರತದಲ್ಲಿ ಪ್ರಮುಖ ಸಂಗತಿಗಳಾಗಿದ್ದವು. ಅವು ಜಾಗತಿಕ ಮಟ್ಟದಲ್ಲಿ ಶಾಂತಿ ವಿಷಯವಾಗಿ ಒಂದು ಮಾದರಿಯಾಗಿದ್ದವು. ವಿಪರ್ಯಯಾಸ ಏನೆಂದರೆ ಇದೆ ಸಮಯದಲ್ಲಿ ನಾನು ಮೆಲ್ಬೋರ್ನ್ ಯುನಿವರ್ಸಿಟಿಯಲ್ಲಿ ಶಾಂತಿ ಸೇನೆಯ ಬಗ್ಗೆ ಪಾಠಮಾಡುತ್ತಿದ್ದೆ ಆದರೆ ಭಾರತೀಯ ವಿದ್ಯಾರ್ಥಿಗಳು ನಂಬಲು ಸಾಧ್ಯವಾಗದಷ್ಟು ಅದರ ಬಗ್ಗೆ ಅಜ್ಞಾನಿಗಳಾಗಿದ್ದರು ಬಹುಶಃ ಗಾಂಧಿ ಅಧ್ಯಯನ ಕೋರ್ಸ್‌ಗಳು ಈ ವಿಷಯದ ಬಗ್ಗೆ ಕಣ್ಣುಪಟ್ಟಿ ಕಟ್ಟಿಕೊಂಡಿದಿರಬಹುದು, ತತ್ಪರಿಣಾಮವಾಗಿ ವಿದ್ಯಾರ್ಥಿಗಳು ಈ ದೊಡ್ಡ ಪರಂಪರೆಯಿಂದ ವಂಚಿತರಾಗಿರುವರು.


(ಮುಂದುವರಿಯುವುದು...)

(ಸಾಭಾರ : ಗಾಂಧೀಮಾರ್ಗ್ ; ಅನು : ಸುಕೌ)

* * *

ಜನಪದ ನಿಲಯದ ಅಂತರಂಗದಲ್ಲಿ.. ೧೧೧

– *ಸುರೇಂದ್ರ ಕೌಲಗಿ*



ಟ್ರಸ್ಟ್ ನಡೆಸುತ್ತಿದ್ದ ವಯಸ್ಕ ಮಹಿಳೆಯರ ಶಾಲೆಯ ವಿದ್ಯಾರ್ಥಿನಿಯರಿಗಾಗಿ ಅವರ ಓದಿನ ನಂತರ ಅವರಿಗೆ ಉದ್ಯೋಗ ಸೃಷ್ಟಿಸುವ ದೃಷ್ಟಿಯಿಂದ ಮುದ್ರಣಾಲಯವನ್ನು ಪ್ರಾರಂಭಿಸಲಾಯಿತು ೧೯೫೦-೬೦ರ ದಶಕಗಳಲ್ಲಿ ಮುದ್ರಣಾಲಯದ ಕೆಲಸ ಈಗಿನಷ್ಟು ಆಧುನೀಕರಣಗೊಂಡಿರಲಿಲ್ಲ. ಯಾಂತ್ರೀಕೃತವಾಗಿರಲಿಲ್ಲ. ಮುದ್ರಣಾಲಯದ ಎಲ್ಲ ಕೆಲಸವನ್ನು ಶರೀರ ಶ್ರಮದಿಂದಲೇ ಮಾಡಬೇಕಾಗುತ್ತಿತ್ತು. ಆದ್ದರಿಂದ ಮುದ್ರಣದ ಉದ್ಯಮದಲ್ಲಿ, ಖಾದಿ ಕ್ಷೇತ್ರದಂತೆ ಅಪಾರವಾದ ಉದ್ಯೋಗವಕಾಶಗಳು ಇದ್ದವು. ಶರೀರಶ್ರಮಾಧಾರಿತ ಮತ್ತು ಯುಕ್ತ ತಂತ್ರಜ್ಞಾನದಿಂದ ಕೂಡಿದ್ದುದರಿಂದ ಮುದ್ರಣಾಲಗಳು ಅನೇಕ ಕಡೆಗೆ ವಿಕೇಂದ್ರಿಕೃತವಾಗಿ ಕೆಲಸ ಮಾಡುತ್ತಿದ್ದವು. ವಿದ್ಯುಚ್ಛಕ್ತಿಯು ಅಷ್ಟೊಂದು ಅತ್ಯಗತ್ಯವಾಗಿಲ್ಲದೇ ಇದ್ದುದರಿಂದ ಸಣ್ಣ ಸಣ್ಣ ಊರುಗಳಲ್ಲಿಯೂ ಕೂಡ ಮುದ್ರಣಾಲಯಗಳು ಇದ್ದವು. ತಮ್ಮ ಶರೀರಶ್ರಮದಿಂದ ಮುದ್ದಾಗ ಮುದ್ರಿಸಿದ ಪುಸ್ತಕವನ್ನು, ಪತ್ರಿಕೆಗಳನ್ನು ನೋಡಿದಾಗ ಅವರಿಗೆ ಆಗುತ್ತಿದ್ದ ಸಂತೋಷ ಅಷ್ಟಿಷ್ಟಲ್ಲ. ಮುದ್ರಣಾಲಯವೊಂದು ವಿಕೇಂದ್ರೀಕೃತ ಉದ್ಯೋಗ ಸೃಷ್ಟಿಯ ವ್ಯವಸ್ಥೆಯಾಗಿದ್ದರಿಂದ ಮುದ್ರಣದ ಕಲೆ ಗೊತ್ತಿರುವ ಕೆಲಸಗಾರರು ತಮಗೆ ಇಷ್ಟವಾದ ಊರಿಗೆ ಹೋಗಿ ಕೆಲಸಮಾಡಿಕೊಂಡು ಇರಬಹುದಾಗಿತ್ತು. ಈ ಎಲ್ಲಾ ಕಾರಣಗಳಿಂದ ಟ್ರಸ್ಟ್ ಪ್ರಾರಂಭಿಸಿದ ಜನಪದ ಮುದ್ರಣಾಲಯ ನಿಜವಾಗಿಯೂ ಅನೇಕ ಮಹಿಳೆಯರಿಗೆ ಸ್ವತಂತ್ರವಾದ ಉದ್ಯೋಗವಕಾಶ ಕಲ್ಪಿಸಿಕೊಟ್ಟಿತು. ಮುದ್ರಣ ಕೆಲಸದಲ್ಲಿ ತರಬೇತಿ ಕೊಡುವುದಕ್ಕೋಸ್ಕರವೇ ಸುಮಾರು ೨೦ ಹೆಣ್ಣು ಮಕ್ಕಳು ಜನಪದ ಮುದ್ರಣಾಲಯುದಲ್ಲಿ ಕೆಲಸಮಾಡುತ್ತಿದ್ದರು. ಮುದ್ರಣಾಲಯ ಇದ್ದದ್ದು ಒಂದು ದೊಡ್ಡ ನಾಡ ಹಂಚಿನ ಮನೆಯಲ್ಲಿ. ಮಣ್ಣಿನ ನೆಲ, ಗಾಳಿ-ಬೆಳಕು ಯಥೇಚ್ಛವಾಗಿತ್ತು. ಮುದ್ರಣಾಲಯದಲ್ಲಿ ಕೆಲಸಮಾಡುತ್ತಿದ್ದ ಹೆಣ್ಣುಮಕ್ಕಳೇ ವಾರಕ್ಕೊಂದು ಬಾರಿ ಸಗಣಿಯಿಂದ ನೆಲವನ್ನು ಸಾರಿಸುತ್ತಿದ್ದರು ಮತ್ತು ಮುದ್ರಣಾಲಯವನ್ನು ಸ್ವಚ್ಛಗೊಳಿಸುತ್ತಿದ್ದರು. ಮುದ್ರಣಾಲಯದಲ್ಲಿ ಸಿಂಗಲ್ ಡೆಮಿ ಅಳತೆಯ ಒಂದು ಸಿಲಿಂಡರ್, ಒಂದು ಸಿಂಗಲ್ ಡೆಮಿ ಟ್ರೆಡಲ್, ಫುಲಸ್ಕೇಪ್ ಅಳತೆಯ ಟ್ರೆಡಲ್ ಇದ್ದವು. ಒಂದು ಮರದ ರೂಲಿಂಗ್ ಮಶಿನ್ ಇತ್ತು. ಇದು ಶರೀರ ಶ್ರಮದಿಂದಲೇ ನಡೆಯುವುದಾಗಿತ್ತು. ಸುಮಾರು ಇಪ್ಪತ್ತು ಕೇಸುಗಳು, ಅವುಗಳ ತುಂಬ ಕನ್ನಡ-ಇಂಗ್ಲಿಷ್ ಟೈಪುಗಳು ಇದ್ದವು. ಮನೆ ಹಳೆಯದಾದರೂ ಹೆಣ್ಣು ಮಕ್ಕಳು ಆ ಮನೆಯನ್ನು ಸ್ವಚ್ಛವಾಗಿ ಇಟ್ಟುಕೊಂಡು ಉತ್ಸಾಹದಿಂದ ಕೆಲಸ ಮಾಡುತ್ತಿದ್ದರು.

ಆ ದೊಡ್ಡ ಮನೆ ಸದಾ ಚಟುವಟಿಕೆಯಿಂದ ಲವಲವಿಕೆಯಿಂದ ಕೂಡಿರುತ್ತಿತ್ತು. ಬೈಂಡಿಂಗ್ ಕೆಲಸದಲ್ಲಿ, ಪೇಪರ್ ಫೋಲ್ಡಿಂಗ್ ಕೆಲಸದಲ್ಲಿ, ರೂಲಿಂಗ್ ಕೆಲಸದಲ್ಲಿ, ಇಂಪೋಸಿಂಗ್ ಕೆಲಸದಲ್ಲಿ ಕರುಣಾಗೃಹದ ಅಂಗವಿಕಲ ಮಕ್ಕಳು ಯಥಾಶಕ್ತಿ ಭಾಗವಹಿಸುತ್ತಿದ್ದರು. ಟ್ರಸ್ಟಿಗೆ ಆಗಾಗ ಬರುತ್ತಿದ್ದ ವಿದೇಶಿ ಸ್ವಯಂ ಸೇವಕರೂ ಕೂಡ ತಮ್ಮ ಸಹಾಯ ಹಸ್ತವನ್ನು ನೀಡುತ್ತಿದ್ದರು. ಅಕ್ಕಪಕ್ಕ ತಾಲ್ಲೂಕಿನಲ್ಲಿಯ ಸಹಕಾರಿ ಸಂಘಗಳು ಮತ್ತು ವಿದ್ಯಾಸಂಸ್ಥೆಗಳು ತಮ್ಮ ಮುದ್ರಣದ ಕೆಲಸಕೊಡುತ್ತಿದ್ದವು. ಅಲ್ಲದೆ ಮದುವೆ ಕಾಲದಲ್ಲಿ ಮೇಲುಕೋಟೆ ಸುತ್ತಲಿನ ಹಳ್ಳಿಗರು ಮದುವೆ ಪತ್ರಿಕೆಗಳನ್ನು ಟ್ರಸ್ಟ್ ಮುದ್ರಣಾಲಯುದಲ್ಲಿಯೇ ಮುದ್ರಿಸಿಕೊಳ್ಳುತ್ತಿದ್ದರು. ಪ್ರತಿತಿಂಗಳು ನಿಗದಿಯಾದ ಕೆಲಸ ಕೆಲಸಗಾರರಿಗೆ ಸಿಗಲೆಂಬ ಉದ್ದೇಶದಿಂದೂ, ಸಾಧ್ಯವಾದಷ್ಟು ಗಾಂಧೀಜಿಯವರ ವಿಚಾರವನ್ನು ಪ್ರಚಾರ ಮಾಡುವ ಉದ್ದೇಶದಿಂದಲೂ ನಿಯತಕಾಲಿಕ ಪತ್ರಿಕೆಯೊಂದನ್ನು ಪ್ರಕಟಿಸಲು ತೀರ್ಮಾನಿಸಲಾಯಿತು. ಅದರಂತೆ 'ಜನಪದ ಸೇವಾ' ಎಂಬ ಟ್ರಸ್ಟಿನ ವಾರ್ತಾಪತ್ರಿಕೆಯನ್ನು ಪ್ರಕಟಿಸಲು ಆನಂತರ ಅದನ್ನು 'ವಿಚಾರಗುಚ್ಛ' ಎಂಬ ಹೆಸರಿನಲ್ಲಿ ವೈಚಾರಿಕ ಮಾಸಪತ್ರಿಕೆಯನ್ನಾಗಿ ಪ್ರಾರಂಭಿಸಲಾಯಿತು. ಕೆಲವೊಂದು ಸಲ ಕೆಲಸದ ಒತ್ತಡ ಬಂದಾಗ ಬಹಳ ರಾತ್ರಿ ಹೊತ್ತಿನವರೆಗೆ ಹೆಣ್ಣು ಮಕ್ಕಳು ಯಾವ ಬೇಸರವಿಲ್ಲದೆ ಕೆಲಸಮಾಡುತ್ತಿದ್ದರು. ಮುದ್ರಣಾಲಯದಲ್ಲಿ ಕೆಲಸಮಾಡುವ ಕೆಲವು ಹೆಣ್ಣು ಮಕ್ಕಳು ವಿಧೆವೆಯರಾಗಿದ್ದರೆ, ಇನ್ನು ಕೆಲವು ಹೆಣ್ಣುಮಕ್ಕಳು ಗಂಡಂದಿರಿಂದ ಪರಿತ್ಯಕ್ತರಾಗಿದ್ದರು. ಇನ್ನು ಕೆಲವರು ಕುಮಾರಿಯರಾಗಿದ್ದರು. ಇವರೆಲ್ಲ ಮುದ್ರಣಾಲಯದ ಕೆಲಸದ ಜೊತೆಗೆ ಸಾಮೂಹಿಕ ಅಡುಗೆ ಮನೆಯನ್ನು ನಡೆಸುತ್ತಿದ್ದರು. ಬೈಂಡಿಂಗ್ ಕೆಲಸವನ್ನು ಮುಖ್ಯವಾಗಿ ಕರುಣಾಗೃಹದ ಅಂಗವಿಕಲ ನಿವಾಸಿ ಹನುಮಂತ ಎಂಬುವವರು ಮಾಡುತ್ತಿದ್ದರು. ಅವರಿಗೆ ಓಡಾಡಲು ಆಗುತ್ತಿರಲಿಲ್ಲ. ಕಾಲುಗಳು ದುರ್ಬಲವಾಗಿದ್ದವು. ಕೈಗಳು ಮಾತ್ರ ಗಟ್ಟಿಯಾಗಿದ್ದವು. ಕುಶಾಗ್ರಮತಿಯಾಗಿದ್ದ ಹನುಮಂತ ಹತ್ತಾರು ಬಗೆಯ ಬೈಡಿಂಗ್ ಕೆಲಸವನ್ನು ಮಾಡುತ್ತಿದ್ದ. ಹೆಣ್ಣುಮಕ್ಕಳಿಗೂ ಕೂಡ ಬೈಂಡಿಂಗ್ ಕೆಲಸ ಕಲಿಸಿಕೊಡುತ್ತಿದ್ದರು. ಹೀಗೆ ಮುದ್ರಣಾಲಯವೆಂಬುದು ಒಂದು ಪರಿವಾರವಾಗಿತ್ತು. ಎಲ್ಲರಿಗೂ ಎಲ್ಲ ವಿಷಯದಲ್ಲಿ ಸಂತೋಷವಿತ್ತು. ಈ ಸಂತೋಷದ ಕಾಲ ಮುಂದೆ ಬಹಳ ದಿನ ಉಳಿಯಲಿಲ್ಲ. ಅಭಿವೃದ್ಧಿ ಎಂಬ ಹೆಸರಿನಲ್ಲಿ ಸುಧಾರಿತ ಮುದ್ರಣ ಯಂತ್ರಗಳು ಬಂದವು. ಗ್ರಾಹಕರೂ ಕೂಡ ಮೊದಲಿನಂತೆ ನಿಧಾನಸ್ಥರಾಗಿರಲಿಲ್ಲ. ಎಲ್ಲ ಅರ್ಜೆಂಟ್ ಎಂದು ಕೇಳುತ್ತಿದ್ದರು. ಕಾಲಕ್ಕೆ ತಕ್ಕ ಹಾಗೆ ಬದಲಾವಣೆ ಮಾಡಿಕೊಳ್ಳಲೇಬೇಕಾಯಿತು. ಮುದ್ರಣಾಲಯ ಟ್ರಸ್ಟಿನದೇ ಆದುದರಿಂದ ನಷ್ಟದಲ್ಲಿ ನಡೆಸುವುದು ಅಸಂಗತವಾಯಿತು. ಈ ಕಾರಣ ಸಾಲದೆಂಬಂತೆ ಮುದ್ರಣಾಲಯವಿದ್ದ ಬಾಡಿಗೆ ಮನೆಯನ್ನು ಒಂದು ಛತ್ರಕ್ಕಾಗಿ ಬಿಟ್ಟುಕೊಡಬೇಕಾಗಿ ಬಂತು. ಮುದ್ರಣಾಲಯ ಮುಚ್ಚಲ್ಪಟ್ಟರೂ ಮುದ್ರಣಾಲಯದಲ್ಲಿ ಕೆಲಸ ಕಲಿತ ಹೆಣ್ಣು ಮಕ್ಕಳೂ ಬೇರೆ ಊರಿಗೆ ವಲಸೆ ಹೋಗಿ ಜೀವನ ನಿರ್ವಹಿಸದರು ಎಂಬುದೇ ಸಾರ್ಥಕದ ಸಂಗತಿ.

ಖಾದಿ ವಿಚಾರ

"ನಮಗಿಂದು ಅಗ್ಯತವಿರುವುದು ಕೋಟಿ ಸಂಖ್ಯೆಗಳಲ್ಲಿ (ವಸ್ತುಗಳ) ಉತ್ಪಾದನೆಯಲ್ಲ-ಬದಲಿಗೆ ಉತ್ಪಾದನೆಯಲ್ಲಿ ತೊಡಗಿರುವ ಜನ ಕೋಟಿ"

- ಮಹಾತ್ಮಾಗಾಂಧಿ

ಖಾದಿ ವಿಚಾರವನ್ನು ನಾವು ಹಲವು ದೃಷ್ಟಿಕೋನಗಳಿಂದ ನೋಡಬಹುದು :-

೧. ಖಾದಿ ತೊಡುವವರ ದೃಷ್ಟಿಕೋನ

೨. ಉದ್ಯೋಗವಕಾಶ

೩. ಆರ್ಥಿಕ ಸ್ವಾಯತ್ತತೆ

೪. ಸಂಪತ್ತಿನ ನ್ಯಾಯಯುತ ವಿತರಣೆ

೫. ಜನರ ಕೌಶಲ್ಯಗಳು ಮತ್ತು ಅವರ ಮಾನಸಿಕ ಹಾಗೂ ಆಧ್ಯಾತ್ಮಿಕ ಆರೋಗ್ಯ.

ಇಂದು ವಿಶ್ವದಾದ್ಯಂತ ನಿರುದ್ಯೋಗ, ಹಿಂಸೆ, ಹತ್ಯೆ, ಸುಲಿಗೆ ಭ್ರಷ್ಟಚಾರ ಇತ್ಯಾದಿಗಳು ಹೆಚ್ಚುತ್ತಲಿವೆ. ನಗರಗಳು ಎಲ್ಲೆ ಮೀರಿ, ಎರ‍್ರಾಬಿರ‍್ರಿ ಬೆಳೆಯುತ್ತಿವೆ. ಪರಿಸರ ನಾಶ, ಮಾಲಿನ್ಯಗಳು ಮಿತಿ ಮೀರಿವೆ. ಜನರು ತಮ್ಮಲ್ಲಿ ಇಲ್ಲದ ಹಣದಿಂದ ಬೇಡದ ವಸ್ತುಗಳನ್ನು ಕೊಳ್ಳವ ಅಭ್ಯಾಸ ಬೆಳಸಿಕೊಂಡಿದ್ದಾರೆ ಇದನ್ನೆಲ್ಲ ಆಧುನಿಕತೆ ಎಂದು ಬಣ್ಣಿಸಲಾಗುತ್ತಿದೆ. ಇವನೆಲ್ಲ ನೋಡುತ್ತ ಹೆಚ್ಚು ಹೆಚ್ಚು ಜನರು ಗಾಂಧಿ ೮೦ ವರ್ಷಗಳ ಹಿಂದೆ ಹೇಳಿದ ಮಾತುಗಳನ್ನು ನೆನಸಿಕೊಳ್ಳುತ್ತಿದ್ದಾರೆ. ಅಂದು ಅವರ ಮಾತುಗಳನ್ನು ತಿರಸ್ಕರಿಸಿ ಜನ ನಕ್ಕಿದ್ದರು. ಇಂದು ಹೆಚ್ಚು ಹಣ ಸಂಪಾದನೆ ಮಾಡಿ ಅದನ್ನು ಖರ್ಚು ಮಾಡುವುದೇ 'ಅಭಿವೃದ್ಧಿ' ಎಂಬಂತಹ ಸರಳ ವ್ಯಾಖ್ಯಾನಗಳನ್ನು ಒಪ್ಪಿಕೊಳ್ಳದ ವಿವೇಕಿಗಳ ಸಂಖ್ಯೆ ಬೆಳೆಯುತ್ತಿದೆ. ಪರಿಸರನಾಶ ಮಾಡುವ ಉದ್ಯೋಗಗಳನ್ನು ವಿರೋಧಿಸುವ ದನಿಗಳೂ ಹೆಚ್ಚುತ್ತಿವೆ. ಗಾಂಧಿ ಹೇಳಿದ ಸರ್ವೋದಯ ಎಂದರೆ, ನನ್ನ ಒಳಿತು ಇತರ ಒಳಿತಿನಲ್ಲಿ ಸೇರಿದೆ ಎಂಬ ಮಾತು ಹೆಚ್ಚು ಜನರ ಮತ್ತು ಮುಖಂಡರ ಬಾಯಿಂದ ಬರುತ್ತದೆ. **- ಕೃಪಾ**

ಸಂತಾಪ...

ವೆನುಜುವೆಲಾದ ಅಧ್ಯಕ್ಷರಾಗಿದ್ದ ಹ್ಯೂಗೋ ಸಾವೇಜ್ ಇತ್ತೀಚೆಗೆ ನಿಧಾನರಾದರು. ಸಾಮ್ರಾಜ್ಯಶಾಹಿ ನೀತಿಯ ಟೀಕಾಕಾರರಾಗಿದ್ದರು. ಜನಪ್ರಿಯ ನಾಯಕರಾಗಿದ್ದರು. ನಿರಕ್ಷರತೆ ವಿರುದ್ಧ, ಅಪೌಷ್ಟಿಕತೆ ವಿರುದ್ಧ, ಹೋರಾಟ ಮಾಡಿ ತಮ್ಮ ದೇಶವನ್ನು ಮುಂದಕ್ಕೆ ತಂದರು. ಇಂತಹ ಒಬ್ಬ ಜನ ನಾಯಕನ ನಿಧಾನಕ್ಕಾಗಿ ಜನಪದ ವಿಚಾರ ತನ್ನ ಸಂತಾಪವನ್ನು ವ್ಯಕ್ತಪಡಿಸುತ್ತದೆ.

ಬಾಂಧವ್ಯ

ಜನಪದ ವಿಚಾರವು ಚಂದಾದಾರರೊಂದಿಗಿನ
ತನ್ನ ಬಾಂಧವ್ಯವನ್ನು ಸದಾಸ್ಮರಿಸುತ್ತದೆ.

ಶ್ರೀ ಎಚ್.ಮಂಜುನಾಥ ಭಟ್
ಶ್ರೀ ಎಂ.ಜಿ.ಶಿವರಾಮು – ಬೆಂಗಳೂರು
ಶ್ರೀ ಸಿ.ಕೃಷ್ಣ – ರಾಮನಾಥಪುರ
ಡಾ॥ ಎಸ್.ಸುಧಾಕರ ನಾಯಕ್ – ಮಣಿಪಾಲ

ಇವರು ಪತ್ರಿಕೆಯ ಚಂದಾ ನವೀಕರಿಸಿದ್ದಕ್ಕಾಗಿ ಹಾಗೂ ಹೊಸದಾಗಿ ಪತ್ರಿಕೆಗೆ ಚಂದಾದಾರರಾದ

ಡಾ॥ ಚಿದಾನಂದ ಮೂರ್ತಿ – ಬೆಂಗಳೂರು

ಇವರಿಗೆ ಜನಪದ ವಿಚಾರದ ಕೃತಜ್ಞತೆಗಳು

"ಜನಪದ ವಿಚಾರ" ವೈಚಾರಿಕ ಮಾಸ ಪತ್ರಿಕೆಯನ್ನು ನೀವು ನೋಡಿದ್ದೀರಿ.


ಸಧ್ಯಕ್ಕೆ ಕರ್ನಾಟಕದಲ್ಲಿ ಗಾಂಧೀ ವಿಚಾರವನ್ನು, ಮುಖ್ಯವಾಗಿ ಸರ್ವೋದಯ ವಿಚಾರವನ್ನು ಜನತೆಗೆ ತಿಳಿಸುತ್ತಿರುವಂಥ ಪತ್ರಿಕೆ 'ಜನಪದ ವಿಚಾರ' ಒಂದೇ. ಈಗ ಭಾರತದಲ್ಲಿ ಮತ್ತು ವಿಶ್ವದ ಬೇರೆಡೆಯಲ್ಲಿ ಸಂಭವಿಸುತ್ತಿರುವ ಸಮಾಜಹಿತ ವಿರೋಧಿ ಬೆಳವಣಿಗೆಗಳನ್ನು ಸರಿಯಾಗಿ ವಿಶ್ಲೇಷಿಸಿ ಸರ್ವೋದಯ ಸಮಾಜ ರಚನೆಯ ಅಗತ್ಯವಿದೆಯೆಂದು ಜನತೆಗೆ ಮುಖ್ಯವಾಗಿ ಯುವಜನತೆಗೆ ತಿಳಿಸುವ ಮಹದ್ಕಾರ್ಯವನ್ನು ಮಾಡುವುದು ಇಂದಿನ ಯುಗಧರ್ಮವಾಗಿದೆ.

ಈ ಅಭಿಪ್ರಾಯವನ್ನು ಗಮನದಲ್ಲಿರಿಸಿಕೊಂಡು ಜನಪದ ವಿಚಾರಕ್ಕೆ ಯೋಗ್ಯವಾದ ಲೇಖನಗಳನ್ನು ಬರೆಯಬಲ್ಲ ಸಮಾನಮನಸ್ಕರ ಬಳಗವೊಂದನ್ನು ರೂಪಿಸಲು ಉದ್ದೇಶಿಸಿದ್ದೇವೆ. ನೀವು ಸಮಾನಮನಸ್ಕರಲ್ಲಿ ಒಬ್ಬರಾಗಿರುವುದರಿಂದ ಜನಪದ ವಿಚಾರದ ಲೇಖಕರ ಬಳಗಕ್ಕೆ ನಿಮ್ಮನ್ನು ಗೌರವಾನ್ವಿತ ಲೇಖಕರನ್ನಾಗಿ ಆಯ್ಕೆಮಾಡಿಕೊಳ್ಳಬಯಸಿದ್ದೇವೆ.

ನೀವು ತಿಂಗಳಿಗೆ ಒಂದು ಲೇಖನವನ್ನು ಅಥವಾ ಪ್ರಚಲಿತ ವಿಷಯಗಳ ಬಗ್ಗೆ ನಿಮ್ಮ ಪ್ರತಿಕ್ರಿಯೆಗಳನ್ನು ಬರೆದು ಆಯಾ ತಿಂಗಳ ೧೫ನೇ ತಾರೀಖಿನೊಳಗೆ ಕಳುಹಿಸಿಕೊಡಬೇಕೆಂದು ಕೋರುತ್ತೇವೆ.

ಲೇಖನಗಳಲ್ಲಿಯ ವಿಚಾರಗಳಿಗೆ ಆಯಾ ಲೇಖಕರು ಹೊಣೆ

ತೆರೆದ–ಅಂಚೆ



KA / SK / MND / 470 / 2012-2014
Regd. no. KAR / KAN / 2000 / 3820

ಶ್ರೀಮತಿ / ಶ್ರೀ

ಶ್ರೀಮತಿ ಪ್ರಭಾವೆಂಕಟೇಶ
"ಶ್ರೀನಿವಾಸ ಕೃಪ" 1ನೇ ಫ್ಲೋರ್, 773/2
ಪಿ.ಜೆ. ಎಕ್ಸ್‌ಟೆನ್ಷನ್, 3ನೇ ಕ್ರಾಸ್
ವಿಶ್ರಾಂತ ಅಪಾರ್ಟ್‌ಮೆಂಟ್ಸ್ ಹತ್ತಿರ
ದಾವಣಗೆರೆ–577002

Left Here

JANAPADA VICHARA
Kannada Monthly Digest Edited Printed and Published by Surendra Koulagi at Janapada Seva Trust Melkote,
Dist- Mandya - 571431. Phone : 08236 316344 / 299854
e-mail : janapada@yahoo.com - web : janapada.net
Printed at Sanketh, Mudrana, Melkote.